ಬೃಹಚ್ಚರಣ

ಸಂಘದ ವಾರ್ತಾ ಪತ್ರಿಕೆ

ಸಂಘದ ಬ್ಯಾಂಕ್ ಖಾತೆಯ ವಿವರ
Mysore Manjapattur Dravida Bruhacharana Sangha
Canara Bank, Sarakki Branch
IFSC: CNRB0000883
A/c No.: **110101195949**
UPI ID: 90574090195949@cnrb

ಸಂಪುಟ : 17 ಸಂಚಿಕೆ : 2 ಖಾಸಗಿ ಪ್ರಸಾರಕ್ಕಾಗಿ ಏಪ್ರಿಲ್ – ಆಗಸ್ಟ್ 2026

E-mail : queries@mmdbs.in magazines@mmdbs.in web : www.mmdbs.in

ವಿಶೇಷಾಂಕ



ಸರ್ವಸದಸ್ಯರ ಸಭೆ



ಶಂಕರ ಜಯಂತಿ

ಅಧ್ಯಕ್ಷರ ನುಡಿ

ಬಂಧು–ಮಿತ್ರರಿಗೆಲ್ಲರಿಗೂ ಸಪ್ರೇಮ ವಂದನೆಗಳು.

"ಬೃಹಚ್ಚರಣ"ದ ಈ ಆವೃತ್ತಿ ನಿಮ್ಮ ಕೈಸೇರಿದೆ. ಇದರಲ್ಲಿ 2025–26ನೇ ಸಾಲಿನ ವಾರ್ಷಿಕ ಸರ್ವಸದಸ್ಯರ ಸಭೆಯ ವಿವರಗಳನ್ನು ಛಾಯಾಚಿತ್ರಗಳೊಂದಿಗೆ ಪ್ರಕಟಿಸಲಾಗಿದೆ. ಪ್ರತಿ ವರ್ಷದಂತೆ ಈ ಬಾರಿಯೂ ಸದಸ್ಯರ ಹಾಗೂ ಅವರ ಕುಟುಂಬವರ್ಗದವರ ಉಪಸ್ಥಿತಿ ಮತ್ತು ಸಹಕಾರದಿಂದ ಈ ಸಭೆಯು ಯಶಸ್ವಿಯಾಗಿ ಸಂಪನ್ನಗೊಂಡಿತು. ಅದಕ್ಕಾಗಿ ನಿಮ್ಮೆಲ್ಲರಿಗೂ ಸಂಘದ ಪರವಾಗಿ ಹೃತ್ಪೂರ್ವಕ ಧನ್ಯವಾದಗಳು.

ಮುಂಬರಲಿರುವ ಒಂದು ದಿನದ ಪ್ರವಾಸಕ್ಕೆ ಎಂದಿನಂತೆ ತಮ್ಮೆಲ್ಲರ ಸಹಕಾರ ಹಾಗೂ ಪ್ರವಾಸದಲ್ಲಿ ಪಾಲ್ಗೊಳ್ಳುವಿಕೆಯನ್ನು ಅಪೇಕ್ಷಿಸುತ್ತೇನೆ.

ಸಂಘದ ಸದಸ್ಯರೆಲ್ಲರೂ ವಾರ್ಷಿಕ ನಿರ್ವಹಣಾ ವೆಚ್ಚವನ್ನು ಪಾವತಿಸುವ ಮೂಲಕ ಸಂಘದ ಕಾರ್ಯಚಟುವಟಿಕೆಗಳಿಗೆ ಯಥಾರೀತಿ ನೆರವು, ಬೆಂಬಲಗಳನ್ನು ನೀಡುವಿರೆಂಬ ಭರವಸೆಯಿದೆ.



ಕೆ.ಎಸ್. ಅರುಣ್
ಅಧ್ಯಕ್ಷರು

ಸಂಪಾದಕೀಯ

ಬಂಧು–ಮಿತ್ರರಿಗೆಲ್ಲ ನಮಸ್ಕಾರಗಳು!

"ಬೃಹಚ್ಚರಣ" ಪತ್ರಿಕೆಯ 52ನೆಯ ಸಂಚಿಕೆಯನ್ನು ನಿಮ್ಮ ಕೈಗಿಡಲು ಸಂತಸವಾಗುತ್ತಿದೆ.

ಈ ಸಂವತ್ಸರದಲ್ಲಿ ಸಾಗುತ್ತಿರುವ ಹಬ್ಬಗಳ ಸಂದರ್ಭವು ನಿಮ್ಮೆಲ್ಲ ಕುಟುಂಬಗಳಿಗೆ ಮಂಗಳಕರವಾಗಿ ಪರಿಣಮಿಸಲೆಂದು ಹಾರೈಸುತ್ತೇನೆ.

ನಮ್ಮ ಪಂಗಡದ ಕುಟುಂಬಗಳಲ್ಲಿ ಜರುಗುವ ಜನನ, ವಿವಾಹ, ಉಪನಯನ, ಗೃಹಪ್ರವೇಶಗಳನ್ನು ಹಾಗೂ ಕುಟುಂಬದಲ್ಲಿನ ಪ್ರತಿಭಾವಂತರ ಸಾಧನೆಗಳನ್ನು ಕಳುಹಿಸಿದಲ್ಲಿ, "ಬೃಹಚ್ಚರಣ" ದಲ್ಲಿ ಪ್ರಕಟಿಸಲು ಅನುವಾಗುತ್ತದೆ.

ಅದೇ ರೀತಿ ನಮ್ಮ ಸಮುದಾಯದ ಕುಟುಂಬಗಳಲ್ಲಿ ಮರಣ ಸಂಭವಿಸಿದಾಗ ಬಂಧುಗಳು, ನೆಂಟರಿಷ್ಟರುಗಳಿಗೆ ಆ ವಾರ್ತೆ ತಲುಪುವುದು ಅತಿಮುಖ್ಯ. ಸಂಘವು ಈ ನಿಟ್ಟಿನಲ್ಲಿ ನೆರವಾಗಬಲ್ಲದು. ಮೃತರ ಹೆಸರು, ತಾರೀಖು, ವಯಸ್ಸು, ಮರಣಹೊಂದಿದ ಸ್ಥಳ ಇವುಗಳನ್ನು ದಯಮಾಡಿ ಕಾರ್ಯಕಾರಿ ಸಮಿತಿಯ ಸದಸ್ಯರಿಗೆ ತಿಳಿಸಬೇಕು. ಜೊತೆಗೆ ಮೃತರ ಒಂದು (ಪಾಸ್ ಪೋರ್ಟ್ ಸೈಜ್ ನ ಫೋಟೋ ಅನ್ನು ಕಳಿಸಿದರೆ ಮುಂದಿನ "ಬೃಹಚ್ಚರಣ" ದಲ್ಲಿ ಪ್ರಕಟಿಸಲು ಅನುಕೂಲವಾಗುತ್ತದೆ.

ಎಲ್ಲರಿಗೂ ಒಳ್ಳೆಯದಾಗಲಿ !



–ಬಿ. ಸುಬ್ರಹ್ಮಣ್ಯಂ
ಸಂಪಾದಕರು

ವಿವಾಹ



ಸಂಘದ ಸದಸ್ಯೆ ಶ್ರೀಮತಿ ಟಿ.ಎಸ್. ರಮಾದೇವಿ ಅವರ ಸಹೋದರಿಯ ಪುತ್ರಿ ಚಿ॥ಸೌ॥ ಯಶಸ್ವಿನಿ ಅವರ ವಿವಾಹಮಹೋತ್ಸವವು ಚಿ॥ರಾ॥ ಸೌರಭ್ ಅವರೊಂದಿಗೆ 26–04–2026 ರಂದು ಬೆಂಗಳೂರಿನಲ್ಲಿ ನೆರವೇರಿತು.

ಸಂಘದ ಹಿರಿಯ ಸದಸ್ಯೆ ಶ್ರೀಮತಿ ಜೆ.ಪಿ. ಲಕ್ಷ್ಮೀದೇವಿ ಅವರ ಮೊಮ್ಮಗ ಹಾಗೂ ಸಂಘದ ಸದಸ್ಯ ಶ್ರೀ ಸೂರ್ಯಪ್ರಕಾಶ್, ದಿ॥ ಶ್ರೀಮತಿ ಮಾಲತಿ ಅವರ ಪುತ್ರ ಚಿ॥ರಾ॥ ಭಾರ್ಗವ ಅವರ ವಿವಾಹ ಮಹೋತ್ಸವವು ಚಿ॥ಸೌ॥ ದೀಪ್ತಿ ಎಮ್. ಪಂಡಿತ್ ಅವರೊಡನೆ 23–08–2026 ರಂದು ಬೆಂಗಳೂರಿನಲ್ಲಿ ನೆರವೇರಿತು.

ಉಪನಯನ



ಸಂಘದ ಸದಸ್ಯ ಶ್ರೀ ರಾಘವೇಂದ್ರ ಪ್ರಸಾದ್, ಶ್ರೀಮತಿ ದೀಪ್ತಿ ದಂಪತಿಗಳು ತಮ್ಮ ಪುತ್ರ ಚಿ॥ ವಿಹಾನ್ ಪ್ರಸಾದ್‌ನ ಉಪನಯನವನ್ನು 23–04–2026 ರಂದು ಬೆಂಗಳೂರಿನಲ್ಲಿ ನೆರವೇರಿಸಿದರು.



ಕಾರ್ಯಕಾರಿ ಸಮಿತಿಯ ಸದಸ್ಯ ಶ್ರೀ ನಿತಿನ್ ಭಾಸ್ಕರ್, ಶ್ರೀಮತಿ ಪೂರ್ಣಿಮಾ ನಿತಿನ್ ದಂಪತಿಗಳು ತಮ್ಮ ಪುತ್ರ ಚಿ॥ ಆದಿತ್ಯ ನಿತಿನ್‌ನ ಉಪನಯನವನ್ನು 27–04–2026 ರಂದು ಬೆಂಗಳೂರಿನಲ್ಲಿ ನೆರವೇರಿಸಿದರು.



ಸಂಘದ ಸದಸ್ಯರಾಗಿರುವ ಶ್ರೀಮತಿ ರಮ್ಯ, ಶ್ರೀ ಎಚ್.ಎಸ್. ಪರಮೇಶ್ವರ್ ದಂಪತಿಗಳ ಪುತ್ರ ಚಿ॥ ಸ್ಕಂದ ಪರಮ್‌ನ ಉಪನಯನವು 05–07–2026ರಂದು ಬಸವನಗುಡಿಯ ಶ್ರೀಮಲ್ಲಿಕಾರ್ಜುನಸ್ವಾಮಿ ದೇವಾಲಯದಲ್ಲಿ ನೆರವೇರಿತು.

ಜನನ

ಸಂಘದ ಸದಸ್ಯೆ ಶ್ರೀಮತಿ ಸುಮನ್ ಭರತ್ ಅವರು ಬುಧವಾರ 23–09–2026ರಂದು ಗಂಡುಮಗುವಿಗೆ ಜನ್ಮನೀಡಿದ್ದಾರೆ. ಸಂಘವು ತಾಯಿ–ಮಗುವಿಗೆ ಆಯುರಾರೋಗ್ಯ ಅಭಿವೃದ್ಧಿಯು ದೊರಕಲೆಂದು ಹಾರೈಸುತ್ತದೆ.

ಪ್ರತಿಭೆ



ಕಾರ್ಯಕಾರಿ ಸಮಿತಿಯ ಹಿಂದಿನ ಸದಸ್ಯ ಶ್ರೀ ಶಂಕರ ಪ್ರಸಾದ್ ಅವರ ಪುತ್ರ ಹಾಗೂ ಸಂಘದ ಸದಸ್ಯ ಶ್ರೀ ಅಕ್ಷಯ್ ಅವರು ಈ ವರ್ಷದ ಮೇ ತಿಂಗಳಿನಲ್ಲಿ ಅಮೆರಿಕದ ಹೌಸ್ಟನ್ ವಿಶ್ವವಿದ್ಯಾಲಯದಿಂದ **M.S. (Construction Managament)** ಪದವಿಯನ್ನು ಗಳಿಸಿರುವರು.



ಸಂಘದ ಸದಸ್ಯ ಶ್ರೀ ಸಂಜಯ್ ರಾಜಾಪುರ ಅವರ ಪುತ್ರ ಹಾಗೂ ಸಂಘದ ಸದಸ್ಯ ಚಿ॥ ಶ್ರೇಯಸ್ ಅವರು ಈ ವರ್ಷದ ಮೇ ತಿಂಗಳಿನಲ್ಲಿ ಅಮೆರಿಕದ ಹೌಸ್ಟನ್ ವಿಶ್ವವಿದ್ಯಾಲಯದಿಂದ **M.S. (Data Science)** ಪದವಿಯನ್ನು ಗಳಿಸಿರುವರು.

ಮೈ.ಮಂ.ದ್ರಾ.ಬೃಹಚ್ಚರಣ ಸಂಘ

(ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಂಗ ಸಂಸ್ಥೆ)

ಕಾರ್ಯಕಾರಿ ಸಮಿತಿ

ಪದಾಧಿಕಾರಿಗಳು

ಅರುಣ್ ಕೆ.ಎಸ್., 6366037069
ಅಧ್ಯಕ್ಷರು

ಹೆಚ್.ಕೆ. ಶಶಿಧರ್, 9845173766
ಉಪಾಧ್ಯಕ್ಷರು

ಆರ್.ಎ. ಶ್ಯಾಮ್‌ಸುಂದರ್, 9845205674
ಕಾರ್ಯದರ್ಶಿ

ನಾಗೇಶ, 9980662118
ಸಹ ಕಾರ್ಯದರ್ಶಿ

ಎಸ್. ಸತ್ಯನಾರಾಯಣ, 9980945699
ಖಜಾಂಚಿ

ವಿ. ಅರುಣ್, 9880166001
ಸಹ ಖಜಾಂಚಿ

ಎನ್. ಶಿವಕುಮಾರ್, 9886505505
ಆಂತರಿಕ ಲೆಕ್ಕ ಪರಿಶೋಧಕರು

ಸದಸ್ಯರು

ಎಸ್.ಪಿ. ಶ್ರೀನಿವಾಸ, 9483725949
ಬಿ. ಸುಬ್ರಹ್ಮಣ್ಯಂ, 9449869667
ಕೆ.ಬಿ.ಎಸ್. ಶರ್ಮ, 9482087344
ಟಿ.ಪಿ. ಸೂರ್ಯನಾರಾಯಣ್, 9945484268
ಆರ್. ಗಣೇಶ್ ಶ್ರೀಧರ್, 9880187686
ಆರ್.ಪಿ. ರವಿಶಂಕರ್, 9449696664
ನಿತಿನ್ ಭಾಸ್ಕರ್, 9844417333
ಎಸ್.ಆರ್. ವಿಜಯಕುಮಾರ್, 9449505463
ಆರ್.ಎಸ್. ವೆಂಕಟೇಶ್, 9620208733
ಎಚ್.ಜಿ. ಅರುಣ್, 9845371728
ವಿ. ಛಾಯಾಪತಿ, 7899638568
ವನಿತಾ ಮಂಜುನಾರಾಯಣ್, 9845033205
ರಾಮು ಪ್ರಭಾಕರ್, 9741017409

ಲೆಕ್ಕ ಪರಿಶೋಧಕರು

ಬಿ.ಎನ್. ಗೋವಿಂದ ಪ್ರಸಾದ್, 9845128229

"ಬೃಹಚ್ಚರಣ" ಪತ್ರಿಕೆಯ ಸಂಪಾದಕ ಮಂಡಳಿ

ಬಿ. ಸುಬ್ರಹ್ಮಣ್ಯಂ, 9449869667– ಸಂಪಾದಕರು

ಎಸ್.ಪಿ. ಶ್ರೀನಿವಾಸ, 9483725949 – ಸದಸ್ಯರು

ಎನ್. ಶಿವಕುಮಾರ್, 9886505505 – ಛಾಯಾಗ್ರಾಹಕರು

ಸಂಘದ ಅಧ್ಯಕ್ಷರು, 6366037069

ಸಂಘದ ಕಾರ್ಯದರ್ಶಿಗಳು, 9845205674

ವಧು–ವರ ಸಂಪದ

ಸಂಘದ ಸದಸ್ಯರಿಗೆ ನಮಸ್ಕಾರಗಳು!

ಬೃಹಚ್ಚರಣ ಪಂಗಡದಲ್ಲಿನ ವಿವಾಹಯೋಗ್ಯ ವಧು–ವರರ ಮಾಹಿತಿಯನ್ನು ಪ್ರಕಟಿಸುತ್ತೇವೆ. ಪ್ರಕಟಿಸಲ್ಪಡುವ ಮಾಹಿತಿ ಇಂತಿರುತ್ತದೆ.

ವಧು / ವರರ ಹೆಸರು, ತಂದೆ ಮತ್ತು ತಾಯಿಯ ಹೆಸರು, ಗೋತ್ರ, ನಕ್ಷತ್ರ, ರಾಶಿ, ವಯಸ್ಸು, ಜನ್ಮದಿನ, ಎತ್ತರ, ವಿದ್ಯಾರ್ಹತೆ, ಉದ್ಯೋಗ ಮತ್ತು

ಸಂಪರ್ಕ ಮಾಹಿತಿ (ಹೆಸರು, ಮೊಬೈಲ್ ನಂ., / ಇ–ಮೇಲ್)

ಮೇಲ್ಕಾಣಿಸಿದ ಮಾಹಿತಿಗಳನ್ನು ಕಳುಹಿಸಿದಲ್ಲಿ ಅವುಗಳನ್ನು ಬೃಹಚ್ಚರಣ ಸಂಚಿಕೆಯಲ್ಲಿ ಪ್ರಕಟಿಸುತ್ತೇವೆ. ಆಸಕ್ತರು ಈ ಮಾಹಿತಿಗಳನ್ನು ಬಳಸಿಕೊಂಡು ಮುಂದುವರೆಯಬಹುದು.

ಪ್ರಕಟಿಸಬೇಕಾದ ಮಾಹಿತಿಯನ್ನು

Editor

"Bruhacharana Sanchike"

#27/1, Bull Temple Road, Basavanagudi, Bengaluru 560004. ಈ ವಿಳಾಸಕ್ಕೆ ಅಂಚೆಯ ಮೂಲಕ ಅಥವಾ ಇ–ಮೇಲ್ ಖಾತೆ magazines@mmdbs.in ಗೆ ಕಳುಹಿಸಬೇಕು.

ಕಾರ್ಯಕಾರಿ ಸಮಿತಿಯ ಸದಸ್ಯರಲ್ಲಿ ಬದಲಾವಣೆಗಳು

ಕಾರ್ಯಕಾರಿ ಸಮಿತಿಯ ಸದಸ್ಯರುಗಳಾಗಿದ್ದ ಶ್ರೀ ಸೋಮಸುಂದರ, ಶ್ರೀ ಆರ್. ರಮೇಶ್ ಮತ್ತು ಶ್ರೀಮತಿ ಎಚ್.ಆರ್. ಲಲಿತಾ ಅವರುಗಳು ವೈಯುಕ್ತಿಕ ಕಾರಣಗಳಿಂದಾಗಿ ಸಮಿತಿಯಿಂದ ನಿರ್ಗಮಿಸಿರುತ್ತಾರೆ. ಅನೇಕ ವರುಷಗಳ ಸೇವೆಗಾಗಿ ಸಮಿತಿಯು ಇವರುಗಳಿಗೆ ಸಂಘದ ಸದಸ್ಯರುಗಳ ಪರವಾಗಿ ಧನ್ಯವಾದಗಳನ್ನು ಅರ್ಪಿಸುತ್ತಾ ಇವರುಗಳಿಗೆ ಉತ್ತಮ ಆರೋಗ್ಯ ಮತ್ತು ಹಲವಾರು ವರ್ಷಗಳ ಕ್ರಿಯಾಶೀಲ ಜೀವನವನ್ನು ಹಾರೈಸುತ್ತದೆ.

ಕಾರ್ಯಕಾರಿ ಸಮಿತಿಗೆ ಸದಸ್ಯರಾಗಿ ಶ್ರೀ ವಿ. ಛಾಯಾಪತಿ, ಶ್ರೀ ರಾಮು ಪ್ರಭಾಕರ್ ಮತ್ತು ಶ್ರೀಮತಿ ವನಿತಾ ಮಂಜುನಾರಾಯಣ್ ಅವರುಗಳು ಸೇರ್ಪಡೆಯಾಗಿರುತ್ತಾರೆ. ಸಮಿತಿಯು ಇವರುಗಳನ್ನು ಹಾರ್ದಿಕವಾಗಿ ಸ್ವಾಗತಿಸುತ್ತದೆ.

ಸದಸ್ಯರಲ್ಲಿ ವಿಜ್ಞಾಪನೆಗಳು

ವಾರ್ಷಿಕ ನಿರ್ವಹಣಾ ವೆಚ್ಚವನ್ನು ಪಾವತಿಸಿರುವ ಸದಸ್ಯರಿಗೆ ಕೃತಜ್ಞತಾಪೂರ್ವಕ ಧನ್ಯವಾದಗಳು. ಇನ್ನೂ ಪಾವತಿಸಿಲ್ಲದ ಸದಸ್ಯರುಗಳು ದಯವಿಟ್ಟು ಶೀಘ್ರವಾಗಿ ಪಾವತಿಸಬೇಕು. ಸಂಘದ ಬ್ಯಾಂಕ್ ಖಾತೆಯ ವಿವರಗಳು ಮತ್ತು **QR Code** ಅನ್ನು ಪುಟ 1 ರಲ್ಲಿ ಕಾಣಿಸಲಾಗಿದೆ. ಈ ವಿಷಯದಲ್ಲಿ ತಮ್ಮಗಳ ಸಹಕಾರವು ಅತ್ಯವಶ್ಯಕವಾಗಿದೆ.

ಸಂಘದ ಸದಸ್ಯತ್ವ ಶುಲ್ಕ		
ಮಹಾ ಪೋಷಕರು	– ₹	25,000/–
ಪೋಷಕರು	– ₹	5,000/–
ಸದಸ್ಯತ್ವ	– ₹	1,000/–
ವಾರ್ಷಿಕ ನಿರ್ವಹಣೆ	– ₹	500/–

ಸಂಘದ 2025–26ನೇ ಸಾಲಿನ ವಾರ್ಷಿಕ ಸರ್ವ ಸದಸ್ಯರ ಸಭೆಯ ವರದಿ

ಬೃಹಚ್ಚರಣ ಸಂಘದ (2025–26ನೇ ಸಾಲಿಗೆ ಅನ್ವಯವಾಗುವ) ಸರ್ವಸದಸ್ಯರ ಸಭೆಯು 26–07–2026 ಭಾನುವಾರದಂದು ನಗರದ ಬಸವನಗುಡಿ ಶ್ರೀಮಲ್ಲಿಕಾರ್ಜುನಸ್ವಾಮಿ ದೇವಾಲಯದ ಆವರಣದಲ್ಲಿರುವ ಶ್ರೀಭ್ರಮರಾಂಬಿಕ ಮಂಗಳಸದನದಲ್ಲಿ ಜರುಗಿತು.

ಸಭೆಗೆ ಪೂರ್ವಭಾವಿಯಾಗಿ ಹಿಂದಿನ ವರ್ಷಗಳಂತೆ ಸಂಘದ ವತಿಯಿಂದ ಇಡೀ ಮನುಕುಲದ ಕ್ಷೇಮಾಭಿವೃದ್ಧಿಗಾಗಿ ಶ್ರೀಗಾಯತ್ರಿ ಭವನದಲ್ಲಿ ಶ್ರೀಸತ್ಯನಾರಾಯಣಸ್ವಾಮಿಯ ಪೂಜಾಕಾರ್ಯವನ್ನು ನೆರವೇರಿಸಲಾಯಿತು. ಸಂಘದ ಉಪಾಧ್ಯಕ್ಷ ಶ್ರೀ ಶಶಿಧರ್ ಮತ್ತು ಶ್ರೀಮತಿ ಪದ್ಮಶ್ರೀ ಶಶಿಧರ್ ದಂಪತಿಗಳು ಪೂಜೆ ಸಲ್ಲಿಸಿದರು. ದೇವಾಲಯದ ಅರ್ಚಕವರ್ಗದವರಾದ ಶ್ರೀ ಸುಧಾಕರ್ ಶರ್ಮ ಮತ್ತು ಶ್ರೀ ಸೂರ್ಯನಾರಾಯಣ ಶರ್ಮ ಅವರುಗಳ ನಿರ್ದೇಶನದಲ್ಲಿ ಈ ಮಂಗಳಕರಕಾರ್ಯವು ಸುಸೂತ್ರವಾಗಿ ನೆರವೇರಿತು.

ಅಂದು ಬೆಳಗ್ಗೆ 8:30ರಿಂದ ಸುಮಾರು 10:00 ಘಂಟೆಯವರೆಗೆ ಸಂಘದ ಸುಮಾರು 200 ಸದಸ್ಯರಿಗೆ ಉಪಾಹಾರದ ವ್ಯವಸ್ಥೆಯಾಗಿತ್ತು. ನಂತರ ಈ ಸದಸ್ಯರು ಪೂಜೆಯಲ್ಲಿ ಪಾಲ್ಗೊಂಡರು.

ಸುಮಾರು 10.30ಕ್ಕೆ ಮಹಾಮಂಗಳಾರತಿ, ಪ್ರಸಾದ ವಿನಿಯೋಗದ ನಂತರ ಹನ್ನೊಂದು ಘಂಟೆಗೆ ಸರ್ವಸದಸ್ಯರ ಸಭೆಯು ಪ್ರಾರಂಭವಾಯಿತು. ಅಂದು ಸಭೆಯಲ್ಲಿ 350 ಸದಸ್ಯರು ಹಾಜರಿದ್ದರು.

ಸಭೆಯ ಪ್ರಾರಂಭ

ಅಂದಿನ ಕಾರ್ಯಕ್ರಮವನ್ನು ಸಂಘದ ಸದಸ್ಯೆ ಶ್ರೀಮತಿ ಸಂಧ್ಯಾ ನಾಗರಾಜ್ ಅವರು ನಿರೂಪಿಸಿದರು. ಸಭೆಯ ನಡಾವಳಿಯನ್ನು ಮೊದಲಿನಿಂದ ಕೊನೆಯವರೆಗೂ ಹಿಂದಿನ ವರ್ಷಗಳಂತೆ ಸಂಘದ ಸದಸ್ಯೆ ಶ್ರೀಮತಿ ಎಚ್.ಆರ್. ಲಲಿತ ಅವರು ದಾಖಲಿಸಿದರು. ಮೊದಲಿಗೆ ಸಂಘದ ಅಧ್ಯಕ್ಷ ಶ್ರೀ ಕೆ.ಎಸ್. ಅರುಣ್, ಕಾರ್ಯದರ್ಶಿ ಶ್ರೀ ಶ್ಯಾಮಸುಂದರ್ ಮತ್ತು (ಖಜಾಂಚಿಗಳ ಅನುಪಸ್ಥಿತಿಯಲ್ಲಿ) ಸಹಖಜಾಂಚಿ ಶ್ರೀ ವಿ. ಅರುಣ್ ಅವರು ವೇದಿಕೆಗೆ ಆಗಮಿಸಿದರು. ಕಾರ್ಯಕ್ರಮವು ಸಂಘದ ಸದಸ್ಯ ಚಿ॥ ಸಮಾಹಿತ ಅವರ ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು. ಪ್ರಾರ್ಥನೆಯ ನಂತರ ಅಧ್ಯಕ್ಷರು ಸಮಾಹಿತ ಅವರಿಗೆ ನೆನಪಿನ ಕಾಣಿಕೆಯನ್ನು ನೀಡಿ ಪ್ರೋತ್ಸಾಹಿಸಿದರು.

ನಮ್ಮನ್ನಗಲಿದ ನಮ್ಮವರು

ಕಳೆದ ವರ್ಷದ ಸರ್ವಸದಸ್ಯರ ಸಭೆಯನಂತರ ಬೃಹಚ್ಚರಣ ಸಮುದಾಯದಲ್ಲಿ ನಮ್ಮನ್ನಗಲಿದವರ ಹೆಸರುಗಳನ್ನು ಕಾರ್ಯಕಾರಿ ಸಮಿತಿಯ ಸದಸ್ಯ ಶ್ರೀ ರಮೇಶ್ ಅವರು ಸಭೆಗೆ ತಿಳಿಸಿದರು. ಸಭಿಕರು ಅರೆನಿಮಿಷದ ಮೌನಾಚರಣೆಯಲ್ಲಿ ದಿವಂಗತರಿಗೆ ಶ್ರದ್ಧಾಂಜಲಿ ಸಲ್ಲಿಸಿದರು.

ಪ್ರಾಸ್ತಾವಿಕ ನುಡಿ

ಪ್ರಾಸ್ತಾವಿಕ ನುಡಿಯನ್ನು ಪ್ರಸ್ತುತಪಡಿಸಿದ ಸಂಘದ ಅಧ್ಯಕ್ಷ ಶ್ರೀ ಕೆ.ಎಸ್. ಅರುಣ್ ಅವರು ಸಂಘದ ಬೆಳವಣಿಗೆ ಮತ್ತು ಕಾರ್ಯಚಟುವಟಿಕೆಗಳ ನಿರ್ವಹಣೆಗಾಗಿ ಸದಸ್ಯರ ಸಂಖ್ಯೆಯು ಹೆಚ್ಚಾಗಬೇಕು, ಈ ವರ್ಷದ ಡಿಸೆಂಬರ್ ಒಳಗಾಗಿ 1000 ಸಂಖ್ಯೆಯನ್ನು ತಲುಪಬೇಕು, ಈ ನಿಟ್ಟಿನಲ್ಲಿ ನಮ್ಮ ಪಂಗಡದ ಯುವಜನಾಂಗವು ಸದಸ್ಯರಾಗಿ ಸಂಘದ ಕಾರ್ಯಚಟುವಟಿಕೆಗಳಲ್ಲಿ ಕೈಗೂಡಿಸಬೇಕು ಎಂದು ಅಭಿಪ್ರಾಯಪಟ್ಟರು. ಅಲ್ಲದೇ ಎಲ್ಲ ಸದಸ್ಯರೂ ವಾರ್ಷಿಕ ನಿರ್ವಹಣಾ ವೆಚ್ಚವನ್ನು ನೀಡುತ್ತ ಸಹಕರಿಸಬೇಕು ಎಂದು ಮನವಿ ಮಾಡಿಕೊಂಡರು.

ಕಾರ್ಯದರ್ಶಿಗಳಿಂದ ವಾರ್ಷಿಕ ವರದಿ ಮಂಡನೆ

ಹಿಂದಿನ ವಿತ್ತವರ್ಷದ ಕಾರ್ಯಚಟುವಟಿಕೆಗಳ ವರದಿಯನ್ನು ಕಾರ್ಯದರ್ಶಿ ಶ್ರೀ ಶ್ಯಾಮಸುಂದರ್ ಅವರು ಮಂಡಿಸಿದರು. ಪ್ರತಿವರ್ಷದಂತೆ ಜರುಗಿದ "ಹಿರಿಯ ಚೇತನರಿಗೆ ಗೌರವ" ಸಲ್ಲಿಕೆ, "ಪ್ರತಿಭಾ ಪುರಸ್ಕಾರ", ಸದಸ್ಯರಿಗಾಗಿ ಒಂದು ದಿನದ ಪ್ರವಾಸ, ನಾಗಾರಾಧನೆ ಮತ್ತು ಶಂಕರ ಜಯಂತಿಯಂದು ನಡೆದ ಭಕ್ತಿಸಂಗೀತ ಕಾರ್ಯಕ್ರಮ ಇವುಗಳಲ್ಲದೇ ಕಳೆದ ವರ್ಷ ನೆರವೇರಿದ "ಗಿರಿಜಾ ಕಲ್ಯಾಣ" ಮತ್ತು ಅಂದು "ಬೃಹಚ್ಚರಣ" ಪತ್ರಿಕೆಯ 50ನೆಯ ಸಂಚಿಕೆ ವಿಶೇಷ ರೂಪದಲ್ಲಿ "ಸುವರ್ಣ ಸಂಚಿಕೆ"ಯಾಗಿ ಬಿಡುಗಡೆಯಾದದ್ದು ಇವುಗಳನ್ನು ಹೆಸರಿಸಿದರು. ಈ ಎಲ್ಲ ಕಾರ್ಯಕ್ರಮಗಳಿಗೆ ಉದಾರ ದೇಣಿಗೆ ನೀಡಿದ ಸದಸ್ಯರುಗಳನ್ನು ಕೃತಜ್ಞತಾಪೂರ್ವಕವಾಗಿ ಸ್ಮರಿಸಿದರು.

ಕಾರ್ಯಕಾರಿ ಸಮಿತಿಯಲ್ಲಿ ಬದಲಾವಣೆಗಳು

ಕಾರ್ಯಕಾರಿ ಸಮಿತಿಯಲ್ಲಿ ಆಗಿರುವ ಬದಲಾವಣೆಗಳನ್ನು ಕಾರ್ಯದರ್ಶಿಗಳು ಸಭೆಗೆ ತಿಳಿಸಿದರು. ಈ ಬಗೆಗಿನ ವಿವರಗಳು ಮೂರನೆಯ ಪುಟದಲ್ಲಿ ಕಾಣಿಸಲ್ಪಟ್ಟಿವೆ.

ವಾರ್ಷಿಕ ಪರಿಶೋಧಿತ ಲೆಕ್ಕ–ಪತ್ರ ಮಂಡನೆ

ನಂತರ, ಸಹಖಜಾಂಚಿ ಶ್ರೀ ಅರುಣ್ ವೆಂಕಟಾಚಲಯ್ಯ ಅವರು (ಎಲ್ಲ ಸದಸ್ಯರಿಗೆ ಮುಂಚಿತವಾಗಿ ಕಳಿಸಿದ್ದ) 2025–26ನೇ ಸಾಲಿನ ಪರಿಶೋಧಿತ ಲೆಕ್ಕ–ಪತ್ರ ವಿವರಗಳನ್ನು ಸಭೆಯ ಅವಗಾಹನೆಗಾಗಿ ಔಪಚಾರಿಕವಾಗಿ ಮಂಡಿಸುತ್ತಾ, ಮುಖ್ಯಾಂಶಗಳಾದ ಒಟ್ಟು ಆದಾಯ, ವೆಚ್ಚ, ಶಿಲ್ಕು ಹಣ ಇವುಗಳನ್ನು ಓದಿ ತಿಳಿಸಿದರು. ಲೆಕ್ಕ–ಪತ್ರಗಳ ಪರಿಶೋಧಕರಾದ ಶ್ರೀ ಗೋವಿಂದಪ್ರಸಾದ್ ಅವರು ಮಾತನಾಡಿ ಲೆಕ್ಕ–ಪತ್ರಗಳ ತಯಾರಿಕೆ ಮತ್ತು ಅದಕ್ಕೆ ಪೂರಕವಾಗಿ ವ್ಯವಸ್ಥಿತವಾಗಿ ಸಲ್ಲಿಸಿದ್ದ ದಾಖಲೆಗಳ ಸಮರ್ಪಕತೆಯನ್ನು ದೃಢೀಕರಿಸಿದರು.

ಸಭೆಯು ಪರಿಶೋಧಿತ ಲೆಕ್ಕ–ಪತ್ರಗಳನ್ನು ಅವಿರೋಧವಾಗಿ ಅನುಮೋದಿಸಿತು.

ಸದಸ್ಯರ ಸಲಹೆ – ಸೂಚನೆ – ಅನಿಸಿಕೆಗಳು

ಈ ಘಟ್ಟದಲ್ಲಿ ಅಧ್ಯಕ್ಷರು ಸಂಘದ ಕಾರ್ಯಚಟುವಟಿಕೆಗಳ ಬಗ್ಗೆ ಸಲಹೆ–ಸೂಚನೆ–ಅನಿಸಿಕೆಗಳನ್ನು ಮಂಡಿಸಲು ಸದಸ್ಯರಿಗೆ ಆಹ್ವಾನ ನೀಡಿದರು. ಅದರಂತೆ ಸರ್ವಶ್ರೀ ಸತ್ಯಮೂರ್ತಿ, ವಿ.ಎಸ್. ಮಣಿ, ಸೋಮಸುಂದರ, ಇವರುಗಳಲ್ಲದೇ ಕರ್ನಲ್ ವಿ.ಜಿ. ರಾಜನ್ ಅವರುಗಳು ಮಾತನಾಡಿ ಸಂಘದ ಕಾರ್ಯಕ್ರಮಗಳ ಬಗ್ಗೆ, ಕಾರ್ಯಶೈಲಿಯ ಬಗ್ಗೆ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದರು. ವಿಶೇಷವಾಗಿ ಹಿರಿಯ ಸದಸ್ಯ ಶ್ರೀ ವಿ.ಎಸ್. ಮಣಿ ಅವರು "ಹಿರಿಯ ಚೇತನರಿಗೆ ಗೌರವ ಸಲ್ಲಿಕೆ" ಮತ್ತು "ಪ್ರತಿಭಾ ಪುರಸ್ಕಾರ" ಗಳು ಒಂದೇ ವೇದಿಕೆಯಮೇಲೆ ಒಂದರನಂತರ ಒಂದನ್ನು ನಡೆಸುತ್ತಿರುವುದು ನಮ್ಮ ಸಮುದಾಯದ ಕುಟುಂಬಗಳಲ್ಲಿನ ಮೂರು ತಲೆಮಾರುಗಳ ನಡುವಿನ ಕೊಂಡಿಯು ಭದ್ರವಾಗಲು ನೆರವಾಗುತ್ತಿವೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಅಲ್ಲಿಗೆ ಸರ್ವಸದಸ್ಯರ ಸಭೆಯ ಔಪಚಾರಿಕ ನಡಾವಳಿಗಳು ಮುಕ್ತಾಯಗೊಂಡವು.

ಗೌರವ ಸಮರ್ಪಣೆ

ಈ ಸಂದರ್ಭದಲ್ಲಿ ಕಳೆದ ವರ್ಷ 50 ವರ್ಷಗಳ ದಾಂಪತ್ಯವನ್ನು ಪೂರೈಸಿದ ಸಂಘದ ಹಿರಿಯ ಸದಸ್ಯ ಕರ್ನಲ್ ವಿ.ಜಿ. ರಾಜನ್ ದಂಪತಿಗಳಿಗೆ ಗೌರವಪೂರ್ಣ ಅಭಿನಂದನೆಗಳನ್ನು ಸಲ್ಲಿಸಲಾಯಿತು. ಸಂಘದ ಲೆಕ್ಕ–ಪತ್ರಗಳನ್ನು ಪ್ರತಿವರ್ಷವೂ ಪರಿಶೋಧಿಸಿ ಅವುಗಳ ಸಮರ್ಪಕತೆಯನ್ನು ಪ್ರಮಾಣೀಕರಿಸುತ್ತಿರುವ ಶ್ರೀ ಬಿ.ಎನ್. ಗೋವಿಂದಪ್ರಸಾದ್ ಅವರಿಗೆ ಸಂಘವು ಗೌರವ ಸಲ್ಲಿಸಿತು.

ಇದೇ ಸಂದರ್ಭದಲ್ಲಿ ಉಪಸ್ಥಿತರಿದ್ದ ಸಂಘದ ಹಿರಿಯ ಹಿತೈಷಿ ಮತ್ತು ದಾನಿ ಶ್ರೀಮತಿ ವೈಜಯಂತಿ ಅವರಿಗೆ ಸಂಘವು ಕೃತಜ್ಞತಾಪೂರ್ವಕವಾಗಿ ಗೌರವ ಸಲ್ಲಿಸಿತು.

ಹಿರಿಯ ಚೇತನರಿಗೆ ಗೌರವ ಸಮರ್ಪಣೆ

ಸಂಘವು ಪ್ರತಿವರ್ಷದಂತೆ ಹಮ್ಮಿಕೊಂಡಿದ್ದ 'ಹಿರಿಯಚೇತನರಿಗೆ ಗೌರವ ಸಲ್ಲಿಕೆ' ಸಮಾರಂಭದಲ್ಲಿ ಅಂದು ನಮ್ಮ ಸಮುದಾಯದ, 75 ವಸಂತಗಳನ್ನು ಪೂರೈಸಿದ್ದ, ಹತ್ತು ಸದಸ್ಯರನ್ನು ವೇದಿಕೆಗೆ ಆಹ್ವಾನಿಸಲಾಯಿತು. ಶ್ರೀಮತಿ ಸಂಧ್ಯ ನಾಗರಾಜ್ ಅವರು ಹಿರಿಯ ಸದಸ್ಯರನ್ನು ಪರಿಚಯಿಸಿದರು. ನಂತರ ಅವರುಗಳಿಗೆ ಶಾಲು, ದೀಪ ಸ್ತಂಭಗಳು, ಡ್ರೈ ಫ್ರೂಟ್ಸ್ ಮತ್ತು ನೆನಪಿನ ಕಾಣಿಕೆಗಳೊಡನೆ ಗೌರವ ಸಲ್ಲಿಸಲಾಯಿತು.

ಕಾರ್ಯಕಾರಿ ಸಮಿತಿಯ ಸದಸ್ಯ ಎನ್. ಶಿವಕುಮಾರ್ ಅವರು ಉತ್ತಮಶ್ರೇಣಿಯ ಹವ್ಯಾಸಿ ವನ್ಯಜೀವಿ ಛಾಯಾಗ್ರಾಹಕರು ಸಹಾ. ಈ ಬಾರಿ ಗೌರವಾನ್ವಿತರಿಗೆ ಸಂಘದ ವತಿಯಿಂದ ನೆನಪಿನ ಕಾಣಿಕೆಯಾಗಿ ಶ್ರೀಯುತರು ಸೆರೆಹಿಡಿದ ಛಾಯಾಚಿತ್ರಗಳಲ್ಲಿ ಒಂದನ್ನು ನೀಡಿದ್ದು ಈ ಬಾರಿಯ ವಿಶೇಷ. ಈ ಕಾಣಿಕೆಗಳನ್ನು ರೂಪಿಸುವ ನಿಟ್ಟಿನಲ್ಲಿ ಶ್ರಮಿಸಿದ ಶ್ರೀ ಶಿವಕುಮಾರ್ ಅವರಿಗೆ ಸಂಘವು ಆಭಾರಿಯಾಗಿರುತ್ತದೆ.

ಪ್ರತಿಭಾ ಪುರಸ್ಕಾರ

ಕಳೆದ ಶೈಕ್ಷಣಿಕ ವರ್ಷದಲ್ಲಿ 10, 12ನೇ ಶ್ರೇಣಿಯಲ್ಲಿ ಯಶಸ್ವಿಯಾದವರನ್ನು ವೇದಿಕೆಗೆ ಆಹ್ವಾನಿಸಲಾಯಿತು. ಪ್ರೋತ್ಸಾಹಪೂರ್ವಕವಾದ ಅಭಿನಂದನೆಯ ಸಂಕೇತವಾಗಿ 2500/– ರೂ. ಗಳ ಗಿಫ್ಟ್ ಕಾರ್ಡ್, ಉತ್ತಮ ಗುಣಮಟ್ಟದ

ಬ್ಯಾಕ್ ಪ್ಯಾಕ್ ಮತ್ತು ಪ್ರಶಂಸಾಪತ್ರವನ್ನು ನೀಡಲಾಯಿತು. ಇದೇ ಶೈಕ್ಷಣಿಕ ವರ್ಷದಲ್ಲಿ ಪದವಿ ಮತ್ತು ಸ್ನಾತಕೋತ್ತರ ದರ್ಜೆಗಳಲ್ಲಿ ಯಶಸ್ವಿಯಾದವರನ್ನು ವೇದಿಕೆಗೆ ಆಹ್ವಾನಿಸಿ ಅಭಿನಂದನಾಪೂರ್ವಕವಾಗಿ ಉತ್ತಮ ಗುಣಮಟ್ಟದ ಬ್ಯಾಕ್ ಪ್ಯಾಕ್ ಮತ್ತು ಪ್ರಶಂಸಾಪತ್ರವನ್ನು ನೀಡಲಾಯಿತು.

ಈ ಸಂದರ್ಭಗಳಲ್ಲಿ ಪುರಸ್ಕೃತರ ಪ್ರೀತಿಪಾತ್ರರು ವೇದಿಕೆಯ ಮೇಲೆ ಒಟ್ಟಾಗಿ ಸಂಭ್ರಮಿಸಿದರು.

ಕಳೆದ ವರ್ಷ ನವರಾತ್ರಿ ಗೊಂಬೆಗಳನ್ನು ಪ್ರದರ್ಶಿಸಿದ್ದ ಸದಸ್ಯರುಗಳಿಗೆ ಪ್ರೋತ್ಸಾಹಪೂರ್ವಕ ನೆನಪಿನ ಕಾಣಿಕೆ ನೀಡಲಾಯಿತು.

ವಂದನಾರ್ಪಣೆ:

ಕಾರ್ಯಕಾರಿ ಸಮಿತಿಯ ನೂತನ ಸದಸ್ಯರಾದ ಶ್ರೀ ಛಾಯಾಪತಿ ಅವರು ಅಂದಿನ ಕಾರ್ಯಕ್ರಮದ ಯಶಸ್ಸಿಗಾಗಿ ಶ್ರಮಿಸಿದ, ಸಹಕರಿಸಿದ ಎಲ್ಲರಿಗೂ ಕೃತಜ್ಞತಾಪೂರ್ವಕ ವಂದನೆಗಳನ್ನು ಸಲ್ಲಿಸಿದರು.

ಭೋಜನ

ಅಂದು ಆಗಮಿಸಿದ್ದ ಸುಮಾರು 350 ಸದಸ್ಯರಿಗೆ ಕಾರ್ಯಕ್ರಮದ ಕೊನೆಯಲ್ಲಿ ದೇವಸ್ಥಾನದ ಬಾಣಸಿಗರು ಅಚ್ಚುಕಟ್ಟಾದ ಭೋಜನವನ್ನು ಉಣಬಡಿಸಿದರು. ಅಂದು ಬಡಿಸಿದ ಫೇಣಿ ಭಕ್ಷ್ಯವನ್ನು ಸಮಿತಿಯ ಸದಸ್ಯರುಗಳಾದ ಸರ್ವಶ್ರೀ ಸೋಮಸುಂದರ, ಎಸ್.ಸಿ. ಶ್ರೀನಿವಾಸ, ಅರುಣ್ ವೆಂಕಟಾಚಲಯ್ಯ, ಗಣೇಶ್ ಶ್ರೀಧರ್ ಮತ್ತು ಬಿ. ಸುಬ್ರಹ್ಮಣ್ಯಂ ಅವರುಗಳು ಪ್ರಾಯೋಜಿಸಿದ್ದರು. ಈ ಸದಸ್ಯರುಗಳಿಗೆಲ್ಲ ಸಂಘವು ಅಭಾರಿಯಾಗಿರುತ್ತದೆ. ಆ ಸಮಾರಂಭದ ಸಂತಸವನ್ನು ಹಂಚಿಕೊಳ್ಳುವ ಸಂಕೇತವಾಗಿ ಸದಸ್ಯರಿಗೆಲ್ಲ ಸಂಘದ ವತಿಯಿಂದ ಬದಾಮ್ ಬರ್ಫಿ ಮತ್ತು ಚೌಚೌ ಪ್ಯಾಕೆಟ್ ಗಳನ್ನು ವಿತರಿಸಲಾಯಿತು.



ಎಸ್.ಸಿ. ಶ್ರೀನಿವಾಸ
9483725949

ಅಲ್ಲಿಗೆ 2025–26ನೇ ಸಾಲಿನ ಸರ್ವಸದಸ್ಯರ ಸಭೆಯು ಸುಸೂತ್ರವಾಗಿ, ಯಶಸ್ವಿಯಾಗಿ ಮುಕ್ತಾಯಗೊಂಡಿತು.

ಯಜುರ್ವೇದ ಉಪಾಕರ್ಮ ಆಚರಣೆ

ಬೃಹಚ್ಚರಣ ಸಂಘದ ಅನೇಕ ಸದಸ್ಯರುಗಳು ಈ ವರ್ಷ ಶ್ರೀಮಲ್ಲಿಕಾರ್ಜುನಸ್ವಾಮಿಯ ದೇವಾಲಯದ ಆಡಳಿತ ಮಂಡಳಿಯು ಶ್ರೀಭ್ರಮರಾಂಬಿಕ ಸದನದಲ್ಲಿ ತ್ರಿಮತಸ್ಥರಿಗಾಗಿ ನಡೆಸಿಕೊಟ್ಟ ಸಾಮೂಹಿಕ ಯಜುರ್ವೇದ ಉಪಾಕರ್ಮದಲ್ಲಿ ಪಾಲ್ಗೊಂಡರು.

ಈ ಆಚರಣೆಯು ಆಗಸ್ಟ್ 18ನೇ ತಾರೀಖು ಶುಕ್ರವಾರದಂದು ನೆರವೇರಿತು.

ಈ ಆಚರಣೆಯ ಕಲಾಪಗಳು ಅಂದು ಬೆಳಿಗ್ಗೆ 9:30 ಘಂಟೆಗೆ ಪ್ರಾರಂಭವಾಗಿ ಮೂರುಘಂಟೆಗಳ ಅವಧಿಯಲ್ಲಿ ನೆರವೇರಿದವು. ಕಾರ್ಯಕ್ರಮದ ನೇತೃತ್ವ ವಹಿಸಿದ್ದ ಪುರೋಹಿತರಾದ ಶ್ರೀ ಶಂಕರನಾರಾಯಣ ಶರ್ಮ ಅವರು ಉಪಾಕರ್ಮವಿಧಿಗಳನ್ನು ವ್ಯವಸ್ಥಿತವಾಗಿ, ಅರ್ಥಪೂರ್ಣವಾಗಿ ನಡೆಸಿಕೊಟ್ಟರು.



ವಿ. ಛಾಯಾಪತಿ
7899638568

ಯಜ್ಞೋಪವೀತಂ ಪರಮಂ ಪವಿತ್ರಂ ಪ್ರಜಾಪತೇರ್ಯತ್ಸಹಜಂ ಪುರಸ್ತಾದ್ ।
ಆಯುಷ್ಯಮಗ್ರ್ಯಂ ಪ್ರತಿಮುಂಚ ಶುಭ್ರಂ ಯಜ್ಞೋಪವೀತಂ ಬಲಮಸ್ತು ತೇಜಃ ॥

(ಅತ್ಯಂತ ಪವಿತ್ರವಾದ, ಸೃಷ್ಟಿಕರ್ತನಾದ ಪ್ರಜಾಪತಿಯ ಜೊತೆಯಲ್ಲೇ ಮೊದಲು ಹುಟ್ಟಿದ, ಆಯುಸ್ಸನ್ನು ವೃದ್ಧಿಸುವ, ಶುಭ್ರವಾದ ಈ ಯಜ್ಞೋಪವೀತವನ್ನು ನಾನು ಧರಿಸುತ್ತಿದ್ದೇನೆ. ಇದು ನನಗೆ ಬಲ ಮತ್ತು ತೇಜಸ್ಸನ್ನು ಕರುಣಿಸಲಿ.)

ಕುಲದೇವತೆ – ನನ್ನ ಅನಿಸಿಕೆ

ಓದುಗರೆಲ್ಲರಿಗೂ ನನ್ನ ನಮಸ್ಕಾರಗಳು

ನಮ್ಮಲ್ಲಿ "ಕುಲ ದೇವತೆ"ಯ ಬಗ್ಗೆ ನಮ್ಮ ಬಂಧು–ಬಾಂಧವರಲ್ಲಿ ಸಾಮಾನ್ಯವಾಗಿ ಮನೆಮಾಡಿರುವ ಗೊಂದಲ ನಿವಾರಣೆಗಾಗಿ ದೈವೀ ಪ್ರೇರಣೆಯನ್ನು ಮೂಲವಾಗಿ ಉಳ್ಳ ಈ ನನ್ನ ಅನಿಸಿಕೆಯನ್ನು ನಿಮ್ಮೊಡನೆ ಹಂಚಿಕೊಳ್ಳುತ್ತೇನೆ.

ನಮ್ಮಗಳ ಕುಲ ಕ್ಷೇತ್ರ ತಮಿಳುನಾಡಿನ ಸೇಲಂ ಬಳಿ ಇರುವ ಮಂಜಪುತೂರ್. ಇದು ನಮ್ಮ ಪೂರ್ವಿಕರ ಪುಣ್ಯ ಸ್ಥಳ. ಇದನ್ನು ಪದ ವಿಭಾಗ ಮಾಡೋಣ. ಮೊದಲನೆಯದು 'ಮನ್ಜ್'. ಇದಕ್ಕೆ ಮಂಜಲ್, ಎಂದರೆ ತಮಿಳ್ ನಲ್ಲಿ ಹರಿಶಿನ ಎಂಬ ಅರ್ಥ ಬರುತ್ತೆ. ಪುತ್ ಎಂಬ ಪದಕ್ಕೆ ಹುತ್ತ, ಅಂದರೆ ಉಷಾರ ಕ್ಷೇತ್ರ. ಹಾಗೆಯೇ ಗೆದ್ದಲು ಅಥವಾ ಬಂಜರು ಭೂಮಿ. ಎಂದೂ ಆಗುತ್ತದೆ. ಹಾಗಾಗಿ ಇಲ್ಲಿ ಹರಿಶಿನದ ಹುತ ಎಂದು ಅರ್ಥೈಸಿ ಕೊಂಡಾಗ ಅದರಲ್ಲಿ ಇರುವುದು ಶೇಷ ನಾಗರ ಅಂಶ. ಕುಲದೇವತೆ ಹೆಣ್ಣು ದೇವತೆ. ಆದ್ದರಿಂದ ಇಲ್ಲಿ ನಾಗದೇವತಾ ಎಂದು ಭಾವಿಸೋಣ. ಅಂದರೆ ನಮ್ಮ ಕುಲ ದೇವತೆ ನಾಗಮ್ಮ ದೇವತೆ ಎಂದು ಅರ್ಥೈಸಬಹುದು.

ನಮ್ಮ ಕುಲ, ಬಂಧು – ಬಾಂದವರು, ಕುಟುಂಬ–ಪರಿವಾರಗಳನ್ನು ಗಮನಿಸಿದಾಗ, ಹಿಂದಿನಿಂದಲ್ಲೂ ನಮ್ಮ ಕುಟುಂಬಗಳಲ್ಲಿ ಗಂಡು ಸಂತತಿ ಇಲ್ಲದೆ ಅಥವಾ ಬರೀ ಹೆಣ್ಣು ಸಂತತಿಗಳಿದ್ದು ಅಥವಾ ಬರೇ ಅವಿವಾಹಿತ / ಬ್ರಹ್ಮಚಾರಿಗಳಿದ್ದು ನಿರ್ವಂಶಿಗಳು ಆಗುತ್ತಿದ್ದೇವೆ. ಇದಕ್ಕೆ ಸರ್ಪ. ದೋಷ ಕಾರಣ. ಮತ್ತೆ ಕುಲದೇವತೆ ಆರಾಧನೆ ಆಗದೆ ಇರುವುದು.

ಇದರ ಪರಿಹಾರ, ಇನ್ನು ಮುಂದೆಯಾದರೂ ನಮ್ಮ ಕುಲಬಾಂಧವರು ತಮ್ಮ ಮನೆಗಳಲ್ಲಿ ಮದುವೆ, ಮುಂಜಿ, ಗೃಹಪ್ರವೇಶ ಮುಂತಾದ ಶುಭ ಕಾರ್ಯಕ್ರಮಗಳಿಗೆ ಪೂರ್ವಭಾವಿಯಾಗಿ ನಾಗರಾಧನೆ ಆಚರಿಸಿ ದೋಷಮುಕ್ತರಾಗೋಣ. ಇದು ನನ್ನ ಅನಿಸಿಕೆ, ತೀರ್ಮಾನವಲ್ಲ. ಅವಶ್ಯವಿದ್ದಲ್ಲಿ ಕೂಡಿ ಕಲೆತು. ಮಾತನಾಡೋಣ.

ನಾಂದಿ, ಸಮಾರಾಧನೆಗೆ ಪುರೋಹಿತರು ಕೇಳುವುದು ಕುಲದೇವತೆ ಹಾಗೂ ಕುಲವೃಕ್ಷ. ಕುಲದೇವತೆ ನಾಗಮ್ಮ ಮಾತಾ. ಕುಲ ವೃಕ್ಷ ಲಿಂಬಾಕ, ಎಂದರೆ ಬೇವಿನ ಮರ. ಇದಕ್ಕೆ ಆಡಂಬರದ. ಕಷ್ಟದ ಆಚರಣೆ ಏನು ಇಲ್ಲ. ಸರಳ ಸುಲಭ ಕ್ರಮ. ದೂರಭಾರ ಊರುಗಳು ಪುಣ್ಯ ಕ್ಷೇತ್ರ ಗಳಿಗೆ ಪ್ರಯಾಣ, ದುಬಾರಿ ಖರ್ಚುಗಳು ಏನೂ ಇಲ್ಲ. ಸ್ವಕ್ಷೇತ್ರ, ನಮ್ಮ ವಾಸ್ತವ್ಯದ ಸ್ಥಳದಲ್ಲೇ ಸರಳ ಕ್ರಮದಲ್ಲಿ ಆಚರಿಸಬಹುದು.

ಸರ್ಪ ಎಂಬುದು ಚರ. ಅಂದರೆ ಸ್ಥಿರವಾಗಿ, ಒಂದು ಕಡೆ ನಿಲ್ಲದೆ ಚಲಿಸುವ ಪ್ರಾಣಿಯಾದ್ದರಿಂದ, ನಮಗೂ ನಿರ್ದಿಷ್ಟವಾದ ಸ್ಥಳ ಕ್ಷೇತ್ರವಿಲ್ಲ. ಆದ್ದರಿಂದ ಸ್ವಗೃಹವೇ ಶುಭ ಕಾರ್ಯಕ್ರಮಗಳಿಗೆ ಪ್ರಶಸ್ತವಾದದ್ದು.

ಪೂರ್ವದಲ್ಲಿ ದೇವರ ಸಮಾರಾಧನೆ, ಸುಹಾಸಿನಿ ಪ್ರಾರ್ಥನೆ, ನಾಂದಿ ಸಮಾರಾಧನೆ ಆಚರಿಸಬಹುದು. ಅಂದರೆ ಪೂಜಾ ಆರಂಭದಲ್ಲಿ ಬೆಳಿಗ್ಗೆ ಹುತ್ತಕ್ಕೆ ಅಥವಾ ನಾಗರಕಲ್ಲಿಗೆ ಹಾಲು ತನಿ ಎರೆದು ಶೋಡಶ ಉಪಚಾರ, ಪೂಜೆ ಮಾಡಿ ನಾಗಮ್ಮನ ಪ್ರೀತ್ಯರ್ಥವಾಗಿ ಒಬ್ಬ ಸುವಾಸಿನಿಗೆ, ಮಂಗಳದ್ರವ್ಯ, ಮೊರದ ಬಾಗಿನ ಕೊಟ್ಟು ಆಮೇಲೆ ಮುಖ್ಯ ಕಾರ್ಯಕ್ರಮವನ್ನು ಪ್ರಾರಂಭಿಸಬಹುದು. ಆಗ ಎಲ್ಲವೂ ಸುಸೂತ್ರವಾಗಿ ನೇರವೇರುತದೆ. ಈ ಆಚರಣೆ ಕುಟುಂಬ–ಪರಿವಾರಗಳಿಗೆ ಮಂಗಳಕರವಾಗಿ ಪರಿಣಮಿಸುತ್ತದೆ.



ಅನೇಕಲ್ ನಾಗರಾಜ್
9886844954

ಶ್ರೀರಸ್ತು, ಶುಭಮಸ್ತು

ನಮಸ್ತೆ ಕುಲದೇವಜ್ಞೆ ನಮಸ್ತೆ ಕುಲದೇವತೇ ।
ಮಾಂ ಚ ರಕ್ಷ ಸದಾ ಭಕ್ತ್ಯಾ ಪ್ರಸನ್ನಾ ಭವ ಸರ್ವದಾ ॥

(ನಮ್ಮ ವಂಶ ಅಥವಾ ಕುಲದ ಸರ್ವಜ್ಞಳಾದ ಓ ಕುಲದೇವತೆಯೇ, ನಿನಗೆ ನಮಸ್ಕಾರಗಳು. ನಮ್ಮನ್ನು ಯಾವಾಗಲೂ ಭಕ್ತಿಯಿಂದ ರಕ್ಷಿಸು ಮತ್ತು ಸದಾ ನಮ್ಮ ಮೇಲೆ ಪ್ರಸನ್ನಳಾಗಿರು)

ಗೌರಿ ಹಬ್ಬ ಮತ್ತು ಸಾಂಕೇತಿಕತೆ

ಗೌರಿ ಹಬ್ಬ ನನಗೆ ಯಾವಾಗಲೂ ಸಾಂಕೇತಿಕತೆಯನ್ನು ಮೀರಿದ ಒಂದು ಆಚರಣೆ. ನಾನು ಚಿಕ್ಕವಳಿದ್ದಾಗ ಸಂಭ್ರಮದಿಂದ ಹಬ್ಬದ ದಿನ ಅಲಂಕಾರಗಳಲ್ಲಿ ಹಿರಿಯರಿಗೆ ನೆರವಾಗುತ್ತಿದ್ದೆ. ರಂಗೋಲಿ ಹಾಕುವುದು, ತೋರಣ ಕಟ್ಟುವುದು, ಮೊರದ ಬಾಗಿನಕ್ಕೆ ತಯಾರಿ ಮಾಡುವುದು ಮತ್ತು ಇನ್ನೇನು ಕೆಲಸ ಹೇಳಿದರೆ ಅದು!

ಬಿದಿರಿನ ಮೊರಗಳನ್ನು ತೊಳೆದು ಒಣಗಿಸಿ, ಅರಿಸಿನ, ಕುಂಕುಮ ಹಚ್ಚಿಡುವುದು ನಮ್ಮ ಕೆಲಸ. ಅಂದಿನ ದಿನಗಳಲ್ಲಿ ಈ ಬಿದಿರಿನ ಮೊರಗಳು ಎಲ್ಲರ ಮನೆಗಳಲ್ಲೂ ಕಂಡು ಬರುತ್ತಿದ್ದವು. ಇವು ಸೈಜುವಾರಿ ಬರುತ್ತಿದ್ದವು. ನಮ್ಮ ಯೋಗ್ಯತೆಗೆ ಅನುಸಾರವಾಗಿ ಮೊರದ size ನಿರ್ಧರಿತ. ದೊಡ್ಡವರ ಬಾಗಿನದ ಮೊರದಲ್ಲಿ ವಿವಿಧ ಬೇಳೆಕಾಳುಗಳು, ಅಕ್ಕಿ, ತೆಂಗಿನಕಾಯಿ, ಬೆಲ್ಲ, ಬಾಚಣಿಗೆ , ಬಿಚ್ಚೋಲೆ, ಬಳೆ , ಅರಿಸಿನ, ಕುಂಕುಮ, ಎಲೆ, ಅಡಿಕೆ , ಕನ್ನಡಿ, ಕುಬುಸದ ಖಣ / ಸೀರೆ ಮುಂತಾದವು ಇರುತ್ತಿದ್ದವು. ಇದರಲ್ಲಿ ಇರುತ್ತಿದ್ದ ಪ್ರತಿ ಪದಾರ್ಥಗಳು ಆಚರಣೆಯ ಪ್ರತೀಕವಲ್ಲದೆ, ಗಾಢವಾದ ಸಂಕೇತ ಸೂಚಿಸುತ್ತಿದ್ದವು. ಅವು ದಿನನಿತ್ಯದ ವ್ಯವಹಾರಕ್ಕೆ ಅನುಕೂಲವಾದ ಸಾಮಗ್ರಿಗಳಲ್ಲದೆ, ಕೃಷಿ, ಜೀವ ವೈವಿಧ್ಯ, ಆಹಾರ ಭದ್ರತೆ ಮತ್ತು ದಿನ ನಿತ್ಯದ ಅವಶ್ಯ ವಸ್ತುಗಳನ್ನು ಒಳಗೊಂಡಿರುತ್ತಿತ್ತು. ಪ್ರತಿನಿತ್ಯ ಉಪಯೋಗಕ್ಕೆ ಬರುವಂತಹುದನ್ನೇ ಕೊಡಲಾಗುತ್ತಿತ್ತು.

ಮನೆಯಲ್ಲೇ ಇದ್ದ ಅಕ್ಕತಂಗಿಯರು, cousins, ಸ್ನೇಹಿತೆಯರು, ಎಲ್ಲರಿಗೂ ಈ ಬಾಗಿನವನ್ನು ನಮ್ಮ ಕೈಯಲ್ಲಿ ಕೊಡಿಸುತ್ತಿದ್ದರು. ಮಕ್ಕಳಾದ ನಮಗೆ ಪುಟ್ಟ ಮೊರದ ಬಾಗಿನ ಸಿಗುತ್ತಿತ್ತು. ಅದರಲ್ಲಿ ನಮ್ಮ ವಯಸ್ಸಿಗೆ ತಕ್ಕಂತ ಬೊಂಬೆಗಳು, ಆಟದ ಸಾಮಾನು, ಬಳೆಗಳು. ಟೇಪು, ಸರ, ಕುಚ್ಚು, ಹೊಸ ಬಟ್ಟೆಗಳು, ತಲೆಗೆ ಹಾಕುವ ಕ್ಲಿಪ್ ಗಳು, ಸಾಂಪ್ರದಾಯಿಕ ತಿಂಡಿಗಳು ಮತ್ತು ಕೊಂಚ ಚಿಲ್ಲರೆ ಹಣ ಕೂಡ ದೊರಕುತ್ತಿದ್ದವು.

ಬಿದಿರಿನ ಮೊರ ಗ್ರಾಮೀಣ ಕಲೆಗಾರಿಕೆ ಮತ್ತು ಆರ್ಥಿಕತೆಯ ಸಂಕೇತವಾಗಿತ್ತು. ಅದು ಪರಿಸರ ಸ್ನೇಹಿಯಲ್ಲದೆ, ವಿವಿಧೋಪಯೋಗಿ ವಸ್ತುವಾಗಿತ್ತು. ಅದನ್ನು ಧಾನ್ಯಗಳನ್ನು ಶುದ್ಧ ಮಾಡುವುದು, ಒಣಗಿಸುವುದು ಮುಂತಾದ ಅನೇಕ ಚಟುವಟಿಕೆಗಳಿಗೆ ಬಳಸುತ್ತಿದ್ದರು.

ಮೊರದ ಬಾಗಿನದ ಕೊಡುಕೊಳ್ಳುವಿಕೆ ಒಂದು ರೀತಿಯಲ್ಲಿ ಹೆಣ್ಣುಮಕ್ಕಳನ್ನು ಹತ್ತಿರಕ್ಕೆ ತಂದು ಅವರ ಬಾಂಧವ್ಯಗಳನ್ನು ಗಟ್ಟಿಗೊಳಿಸುವ ಪ್ರಯತ್ನವಾಗಿತ್ತು. ಸಂಬಂಧದಲ್ಲಿ ಏನೇ ಓರೆಕೋರೆಗಳಾಗಿರಲಿ ಅವೆಲ್ಲ ಈ ಹಬ್ಬದ ಬಾಗಿನದ ಸಂದರ್ಭದಲ್ಲಿ ದೂರವಾಗುತ್ತಿದ್ದವು.

ಮೊದಲ ಬಾಗಿನ ಯಾರಿಗೆ ಕೊಡಬೇಕು ಎಂದು ನಿರ್ಧರಿತ ಕಟ್ಟುಪಾಡುಗಳು ಇದ್ದುವು. ವಯಸ್ಸಾದ ಸುಮಂಗಲಿಯರಿಗೆ ಕನ್ಯೆಯರಿಗೆ ಹೊಸದಾಗಿ ಮದುವೆಯಾದ ಹುಡುಗಿಯರಿಗೆ ಹೀಗೆ. ಈ ಹಬ್ಬ, ಅದರ ಆಚರಣೆಗಳು ಬಂಧು–ಮಿತ್ರರ ನಡುವಿನ ಸಂಬಂಧಗಳನ್ನು ಪೋಷಿಸುತ್ತಿದ್ದವು ಮತ್ತು ಸಾಮಾಜಿಕ ಸ್ತರಗಳನ್ನು ಮೀರಿದ ಸೌಹಾರ್ದತೆಯನ್ನು ಉಳಿಸಿ, ಬೆಳೆಸುತ್ತಿದ್ದವು.



ರಾಜಲಕ್ಷ್ಮಿ ಎಸ್.
9845371961

ಈ ದಿನಗಳಲ್ಲಿ ನಾವು ಈ ಪದ್ಧತಿ ಆಚರಣೆಗಳಿಂದ ದೂರ ಸರಿಯುತ್ತಿರಬಹುದು. ಆದರೆ ಅವುಗಳಿಂದ ಉಂಟಾಗುತ್ತಿದ್ದ ಸಡಗರ – ಸಂಭ್ರಮಗಳನ್ನು ನೆನಸಿಕೊಂಡಾಗ, ನೆನಪಿನ ಪದರಗಳು ಮಡಿಕೆಗಳು ಬಿಚ್ಚಿಕೊಳ್ಳುತ್ತಾ ಹಬ್ಬದ ಹಿಂದಿನ ಕಾಳಜಿ ಆರೈಕೆ, ಸಮೃದ್ಧತೆಯ ಜೊತೆಯಲ್ಲಿ ನಮ್ಮ ಸಂಬಂಧಗಳ ಬಲವರ್ಧನೆಯ, ಸಾಮಾಜಿಕ ಆಚರಣೆಗಳನ್ನು ಕಾಣಿಸುತ್ತವೆ. ಆದರೆ, ಇದರೊಟ್ಟಿಗೇ ನಮಗೆ ಕೆಲವು ಸಾಮಾಜಿಕ ಸ್ತರಗಳ ನಿರಾಕರಣೆ, ಹೊರತು ಪಡಿಸುವಿಕೆಯೂ ಗಮನಕ್ಕೆ ಬರುತ್ತದೆ.

ನಮ್ಮ ಸಮುದಾಯದ ಪ್ರತಿಭಾವಂತ – ಮಟ್ಟನಹಳ್ಳಿ ಸೂರಪ್ಪ ಪ್ರಭಾಕರ



ಖ್ಯಾತ ಶೈಕ್ಷಣಿಕ, ಪತ್ರಕರ್ತ ಮತ್ತು ಲೇಖಕರಾದ ಡಾ. ಎಂ.ಎಸ್. ಪ್ರಭಾಕರ ಅವರು ಡಿಸೆಂಬರ್ 29, 2022 ರಂದು ಕರ್ನಾಟಕದ ಕೋಲಾರದಲ್ಲಿರುವ ತಮ್ಮ ಪೂರ್ವಜರ ಮನೆಯಲ್ಲಿ 86 ನೇ ವಯಸ್ಸಿನಲ್ಲಿ ನಿಧನರಾದರು. ಅವರ ಬೌದ್ಧಿಕ ಆಳ, ನಮ್ರತೆ ಮತ್ತು ಸತ್ಯಕ್ಕೆ ಅಚಲವಾದ ಬದ್ಧತೆಗೆ ಹೆಸರುವಾಸಿಯಾದ ಅವರ ಜೀವನ ಮತ್ತು ಸಾಧನೆಯು ಶಿಕ್ಷಕ, ಚಿಂತಕ, ಬರಹಗಾರ ಮತ್ತು ಸ್ನೇಹಿತರಾಗಿ ಅನೇಕರನ್ನು ಗಮನಾರ್ಹವಾಗಿ ಪ್ರಭಾವಿಸಿತು.

1936 ರಲ್ಲಿ ಕರ್ನಾಟಕದಲ್ಲಿ ಜನಿಸಿದ ಡಾ. ಪ್ರಭಾಕರ ಅವರ ವೃತ್ತಿಪರ ಪ್ರಯಾಣವು ಸುಮಾರು ನಾಲ್ಕು ದಶಕಗಳ ಕಾಲ ನಡೆಯಿತು. ಆರಂಭದಲ್ಲಿ ಶೈಕ್ಷಣಿಕವಾಗಿ, ಅವರು ಶೀಘ್ರದಲ್ಲೇ ಭಾರತದ ಅತ್ಯಂತ ಗೌರವಾನ್ವಿತ ಪತ್ರಕರ್ತರಲ್ಲಿ ಒಬ್ಬರಾದರು. ಅವರ ವೃತ್ತಿಜೀವನವು ಭಾರತದ ಈಶಾನ್ಯ ಪ್ರದೇಶದಲ್ಲಿ ಅವರ ಕಾರ್ಯಚಟುವಟಿಕೆಗಳಿಂದ ಗುರುತಿಸಲ್ಪಟ್ಟಿತು. 1983 ರಿಂದ 1994 ರವರೆಗೆ, ಅವರು ಗುವಾಹಟಿಯಲ್ಲಿ ದಿ ಹಿಂದೂ ಮತ್ತು ಫ್ರಂಟ್‌ಲೈನ್‌ನ ವಿಶೇಷ ವರದಿಗಾರರಾಗಿ ಸೇವೆ ಸಲ್ಲಿಸಿದರು, ಈ ಪ್ರದೇಶದ ಸಂಕೀರ್ಣ ವಾಸ್ತವಗಳನ್ನು ಸ್ಪಷ್ಟತೆ ಮತ್ತು ಸಹಾನುಭೂತಿಯಿಂದ ಬಿಂಬಿಸಲಾಯಿತು.

ಅವರ ಪತ್ರಿಕೋದ್ಯಮವು ಅವರ ಪಾಂಡಿತ್ಯಪೂರ್ಣ ಸ್ವಭಾವದಿಂದ ನಿರೂಪಿಸಲ್ಪಟ್ಟಿತು. ಅವರು ಸ್ಥಳೀಯ ಸಂಸ್ಕೃತಿಯಲ್ಲಿ ಆಳವಾಗಿ ತಮ್ಮನ್ನು ತಾವು ತೊಡಗಿಸಿಕೊಂಡರು ಮತ್ತು ಜನರೊಂದಿಗೆ ಆಳವಾದ ಸಂಪರ್ಕ ಸಾಧಿಸಲು ಅಸ್ಸಾಮಿ ಭಾಷೆಯನ್ನು ಕಲಿತರು. ಈ ಕಲಿಕೆಯು ಒಂದು ಪ್ರದೇಶವನ್ನು ಅರ್ಥಮಾಡಿಕೊಳ್ಳಲು ಅಲ್ಲಿನ ಜನರು ಮತ್ತು ಅವರ ಇತಿಹಾಸಗಳನ್ನು ನಿಜವಾಗಿಯೂ ಆಲಿಸುವ ಅಗತ್ಯವಿದೆ ಎಂಬ ಅವರ ನಂಬಿಕೆಯನ್ನು ಬಲ ಪಡಿಸಿತು.

ಡಾ. ಪ್ರಭಾಕರ ಅವರ ಪ್ರಭಾವ ಪತ್ರಿಕೋದ್ಯಮವನ್ನು ಮೀರಿ ಕನ್ನಡ ಸಾಹಿತ್ಯಕ್ಕೂ ವಿಸ್ತರಿಸಿತು, ಅಲ್ಲಿ ಅವರು "ನವ್ಯ" ಸಾಹಿತ್ಯ ಚಳುವಳಿಯಲ್ಲಿ ಪ್ರಮುಖ ಪಾತ್ರ ವಹಿಸಿದರು. ಅವರ "ಕುದುರೆ ಮೊಟ್ಟೆ" **"ಅಂಜಿಕಿನ್ಯಾತಕಯ್ಯೋ", "ಒಂದು ತೊಲ ಪುನುಗು ಮತ್ತು ಇತರ ಕಥೆಗಳು"** ನಂತಹ ಇವರ ಕೃತಿಗಳು ಕನ್ನಡ ಸಾಹಿತ್ಯವನ್ನು ಆಮೂಲಾಗ್ರ ಆಧುನಿಕತೆಯತ್ತ ಕೊಂಡೊಯ್ಯಲು ನೆರವಾದವು, ಮಾನವ ಅನುಭವದ ಬಹು ದೃಷ್ಟಿಕೋನಗಳು ಮತ್ತು ನವೀನ ಪರಿಶೋಧನೆಗಳನ್ನು ಪ್ರಸ್ತುತಪಡಿಸಿದವು.

1994 ರಲ್ಲಿ, ಡಾ. ಪ್ರಭಾಕರ ದಕ್ಷಿಣ ಆಫ್ರಿಕಾಕ್ಕೆ ತೆರಳಿದರು, ವರ್ಣಭೇದ ನೀತಿಯ ನಂತರದ ಯುಗದಲ್ಲಿ ದಿ ಹಿಂದೂ ಮತ್ತು ಫ್ರಂಟ್‌ಲೈನ್‌ಗಾಗಿ ವರದಿಗಾರರಾಗಿದ್ದರು. ಅವರು ದಕ್ಷಿಣ ಆಫ್ರಿಕಾ ಮತ್ತು ಸುತ್ತಮುತ್ತಲಿನ ರಾಷ್ಟ್ರಗಳಲ್ಲಿನ ಪರಿವರ್ತನೆಯನ್ನು ತಮ್ಮ ಹಿಂದಿನ ಕೆಲಸವನ್ನು ವ್ಯಾಖ್ಯಾನಿಸಿದ ಅದೇ ಬೌದ್ಧಿಕ ಕಠಿಣತೆ ಮತ್ತು ಸಹಾನುಭೂತಿಯೊಂದಿಗೆ ವರದಿ ಮಾಡಿದರು. 2002 ರಲ್ಲಿ ಭಾರತಕ್ಕೆ ಹಿಂದಿರುಗಿದ ನಂತರವೂ, ಅವರು ಈಶಾನ್ಯದೊಂದಿಗೆ ಆಳವಾದ ಸಂಪರ್ಕವನ್ನು ಹೊಂದಿದ್ದರು, ಎಂಟು ವರ್ಷಗಳ ಕಾಲ ದಿ ಹಿಂದೂ ಪತ್ರಿಕೆಗೆ ಸಲಹಾ ಸಂಪಾದಕರಾಗಿ ಕೊಡುಗೆ ನೀಡಿದರು.

ತಮ್ಮ ಜೀವನದುದ್ದಕ್ಕೂ, ಡಾ. ಪ್ರಭಾಕರ ಅವರು ಪತ್ರಿಕೋದ್ಯಮವನ್ನು ಸೃಜನಶೀಲ ಬರವಣಿಗೆಯೊಂದಿಗೆ ಸಮತೋಲನಗೊಳಿಸಿದರು. ಅಸ್ಸಾಂನೊಂದಿಗಿನ ಅವರ ಆಳವಾದ ಸಂಪರ್ಕವನ್ನು ಪ್ರತಿಬಿಂಬಿಸುವ ಮೂಲಕ ಅವರು "ಕಾಮರೂಪಿ" ಅನ್ನು ಕನ್ನಡ ಬರಹಗಳಿಗೆ ತಮ್ಮ ಪೆನ್ ಹೆಸರಾಗಿ ಅಳವಡಿಸಿಕೊಂಡರು. ಅವರ ಇಂಗ್ಲಿಷ್ ಪುಸ್ತಕಗಳಾದ "ಲುಕಿಂಗ್ ಬ್ಯಾಕ್ ಇನ್ಟು ದಿ ಫ್ಯೂಚರ್" ಮತ್ತು "ವರ್ಡ್ಸ್ ಅಂಡ್ ಐಡಿಯಾಸ್", ಗುರುತು, ಜನಾಂಗೀಯತೆ, ಸಾರ್ವಭೌಮತ್ವ ಮತ್ತು ದಂಗೆಯನ್ನು ಅಧ್ಯಯನ ಮಾಡುವವರಿಗೆ ಅಮೂಲ್ಯವಾದ ಸಂಪನ್ಮೂಲಗಳಾಗಿವೆ.

ಅವರು ಎಡಪಂಥೀಯ ವಿಚಾರಗಳ ಪ್ರತಿಪಾದಕರಾಗಿದ್ದರು ಮತ್ತು ರಚನಾತ್ಮಕ ಸಾಮಾಜಿಕ ತಾರತಮ್ಯವನ್ನು ವಿಮರ್ಶಿಸಿದರು. ಎಡಪಂಥೀಯ ಚಿಂತನೆಗೆ ಅವರ ಬೌದ್ಧಿಕ ಕೊಡುಗೆಗಳನ್ನು ವ್ಯಾಪಕವಾಗಿ ಗುರುತಿಸಲಾಯಿತು,

ಸಾಮಾಜಿಕ ನಡವಳಿಕೆಯ ಮೇಲಿನ ಭಾಷಾ ಮತ್ತು ಜಾತಿ ಪ್ರಭಾವಗಳ ಬಗ್ಗೆ ಅವರಗಿದ್ದ ಒಳನೋಟಗಳು ಗಮನಾರ್ಹವಾದವು.

ಭಾರತದ ಈಶಾನ್ಯವನ್ನು ಅರ್ಥಮಾಡಿಕೊಳ್ಳುವಲ್ಲಿ ಅವರ ಅತ್ಯುತ್ತಮ ಕೊಡುಗೆಗಳನ್ನು ಗೌರವಿಸಿ ಡಾ. ಪ್ರಭಾಕರ ಅವರಿಗೆ 2011 ರಲ್ಲಿ ಶಿವ ಪ್ರಸಾದ್ ಬರೂವಾ ಪತ್ರಿಕೋದ್ಯಮ ಕ್ಷೇತ್ರದ ರಾಷ್ಟ್ರೀಯ ಪ್ರಶಸ್ತಿಯನ್ನು ನೀಡಲಾಯಿತು. ಅವರ ಪತ್ರಿಕೋದ್ಯಮ ತತ್ವಶಾಸ್ತ್ರವು ಸರಳತೆಗಿಂತ ಸಂಕೀರ್ಣತೆಯನ್ನು ಒತ್ತಿಹೇಳಿತು, ಪತ್ರಕರ್ತರನ್ನು ಕ್ಷೇತ್ರಕಾರ್ಯ, ಸಂಶೋಧನೆ ಮತ್ತು ಸಹಾನುಭೂತಿಯನ್ನು ಸಂಯೋಜಿಸಲು ಪ್ರೋತ್ಸಾಹಿಸಿತು.

ಅವರ ಅಪಾರ ಕೊಡುಗೆಗಳ ಹೊರತಾಗಿಯೂ, ಅವರು ತಮ್ಮನ್ನು ಸಾಮಾನ್ಯ ವ್ಯಕ್ತಿ ಎಂದು ಪರಿಗಣಿಸಿದರು ಮತ್ತು ಸ್ವಯಂ ಪ್ರಚಾರವನ್ನು ತಪ್ಪಿಸಿದರು, ಅವರ ಕೆಲಸದ ಸೀಮಿತ ಔಪಚಾರಿಕ ಗುರುತಿಸುವಿಕೆಗೆ ಕೊಡುಗೆ ನೀಡಿದರು. ಅವರ ನಿಧನವು ವಾಸ್ತವಿಕ ಪತ್ರಿಕೋದ್ಯಮ, ಕನ್ನಡ ಸಾಹಿತ್ಯ ಮತ್ತು ಪ್ರಗತಿಪರ ರಾಜಕೀಯಕ್ಕೆ ಗಮನಾರ್ಹ ನಷ್ಟವನ್ನು ಉಂಟುಮಾಡಿದೆ.

ಡಾ. ಎಂ.ಎಸ್. ಪ್ರಭಾಕರ ಅವರು ಬೌದ್ಧಿಕ ಕುತೂಹಲ, ಮತ್ತು ಸತ್ಯಕ್ಕೆ ಬದ್ಧವಾದ ಪರಂಪರೆಯನ್ನು ಬಿಟ್ಟುಹೋಗಿದ್ದಾರೆ.



ಶ್ರೀದೇವಿ ಬಾಲಸುಬ್ರಹ್ಮಣ್ಯಮ್
9740370470

ಭಾಗವತ ಪ್ರಸಂಗ – ಕಂಸನಿಗುಂಟಾದ ಗೊಂದಲ

ಶ್ರೀಮದ್ಭಾಗವತದಲ್ಲಿ ನಿರೂಪಿತವಾಗಿರುವ ಶ್ರೀಕೃಷ್ಣನ ಜನ್ಮ ಸಂದರ್ಭದಲ್ಲಿ ಜರುಗಿದ (ದೈವಸಂಕಲ್ಪಿತ) ವಿದ್ಯಮಾನಗಳು ಹೃದಯಂಗಮವಾಗಿವೆ.

ದೇವಕಿಯ ಗರ್ಭದಲ್ಲಿ ಜನಿಸುವ ಎಂಟನೆಯ ಶಿಶುವಿನಿಂದ ತನ್ನ ಹತ್ಯೆಯಾಗುತ್ತದೆ ಎಂದು ಕಂಸನನ್ನು ಎಚ್ಚರಿಸಿತ್ತು ಅಶರೀರವಾಣಿ. ದುರುಳ ಕಂಸನು ಸೋದರಿಯ ಜೀವವನ್ನೇನೋ ಉಳಿಸಿದನು. ಆದರೆ ತನ್ನ ಪ್ರಾಣರಕ್ಷಣೆಗಾಗಿ ದೇವಕಿಯಲ್ಲಿ ಜನಿಸಿದ ಆರು ಶಿಶುಗಳನ್ನೂ ಹತ್ಯೆಗೈದನು. ದೇವಕಿಯು ಏಳನೆಯಸಲ ಗರ್ಭ ಧರಿಸಿದಾಗ ಒಂದು ಸಂಗತಿ ನಡೆಯಿತು. ಶ್ರೀಮನ್ನಾರಾಯಣನು ದೇವಕಿಯ ಗರ್ಭದಲ್ಲಿದ್ದ ನಾಲ್ಕುತಿಂಗಳ ಭ್ರೂಣವನ್ನು ವಸುದೇವನ ಇನ್ನೊಬ್ಬ ಪತ್ನಿಯಾದ ರೋಹಿಣಿಯ ಗರ್ಭದಲ್ಲಿ ಇರಿಸಲು ಯೋಗಮಾಯೆಗೆ ಆದೇಶಿಸಿದನು. ಆ ಕಾರ್ಯ ನೆರವೇರಿದಮೇಲೆ ಎಲ್ಲರೂ ದೇವಕಿಗೆ ಗರ್ಭಪಾತವಾಯಿತೆಂದು ತಿಳಿದರು. ಆಗ ಕಂಸ ಸಹಜವಾಗಿಯೇ ಗೊಂದಲಗೊಂಡನು. ಹಾಗಾದರೆ ಗರ್ಭಪಾತವಾದ ಶಿಶುವನ್ನು ಏಳನೆಯದೆಂದು ಎಣಿಕೆಯಿಡಬೇಕೆ, ಬೇಡವೇ? ಈ ಸಂದಿಗ್ಧತೆಯಿಂದ ಏನು ಮಾಡಲೂ ತೋರದೇ ಮನಃಶಾಂತಿಯನ್ನು ಕಳೆದುಕೊಂಡನು.

ಅಹಾ! ಇದು ದೈವಲೀಲೆಯೇ! ಯಾರು ದೈವವನ್ನು ತೆಗಳುತ್ತಾರೆಯೋ, ದ್ವೇಷಿಸುತ್ತಾರೆಯೋ, ಸದ್ಭಕ್ತರನ್ನು ನಿಂದಿಸುತ್ತಾರೆಯೋ ಅವರ ನಿದ್ರೆ–ಮನಃಶಾಂತಿಗಳನ್ನು ದೈವವು ಖಂಡಿತವಾಗಿ ಕಳೆಯುತ್ತದೆ ಎಂದು ಕರುಣಾಕರ ಆಚಾರ್ಯರುತಮ್ಮ ಪ್ರವಚನದಲ್ಲಿ ವ್ಯಾಖ್ಯಾನಿಸಿದ್ದಾರೆ. ರೋಹಿಣಿಯ ಗರ್ಭದಲ್ಲಿ ಇರಿಸಲ್ಪಟ್ಟ ಭ್ರೂಣವು ಕಾಲಾನುಗತಿಯಲ್ಲಿ ಬಲರಾಮನಾಗಿ ಜನಿಸಿತು. ದೇವಕಿಯ ಏಳನೆಯ ಶಿಶುವಾದ ಬಲರಾಮನು ಬಲವಂತ, ಸಾಹಸವಂತನಾಗಿ ಬೆಳೆದನು.

ಕಾಲಾನುಕ್ರಮದಲ್ಲಿ ದೇವಕಿಯು ಒಬ್ಬ ಗಂಡುಮಗುವನ್ನು ಪ್ರಸವಿಸಿದಳು. ಆ ಶಿಶುವೇ ಶ್ರೀಕೃಷ್ಣಪರಮಾತ್ಮನು. ದೈವದ ಕಾರ್ಯವೈಖರಿಯು ನಾವು ಮಾನುಷರ ವಿಚಾರಶಕ್ತಿಯ ಅಳವನ್ನು ಮೀರಿದುದು. ನಾವುಗಳು ಊಹಿಸಲೂ ಆಗದ ರೀತಿಯಲ್ಲಿ ದೈವಸಂಕಲ್ಪವು ನೆರವೇರುವುದು. ಅದು ಹಾಗಾಗುವುದು ಮನುಕುಲದ, ಇಡೀ ಸೃಷ್ಟಿಯ ಕಲ್ಯಾಣಕ್ಕಾಗಿಯೆ!

ಜಿ.ಪಿ. ಲಕ್ಷ್ಮೀದೇವಿ
9900128835

ಛಾಯಾಗ್ರಹಣ : ಕೆ. ಸಿ. ನಟರಾಜನ್

ಸತ್ಯನಾರಾಯಣ ಪೂಜೆ (26-07-2026)











ಛಾಯಾಗ್ರಹಣ : ಕೆ. ಸಿ. ನಟರಾಜನ್

ಸರ್ವಸದಸ್ಯರ ಸಭೆ (26-07-2026)












ಛಾಯಾಗ್ರಹಣ : ಕೆ. ಸಿ. ನಟರಾಜನ್

ಹಿರಿಯ ಚೇತನರಿಗೆ ಗೌರವ ಸಮರ್ಪಣೆ 26-07-2026



ಸನ್ಮಾನ್ಯ ಡಾ॥ ಸಿ. ನಾಗರಾಜ್



ಸನ್ಮಾನ್ಯ ವೈ. ಆರ್. ಗಣಪತಿ



ಸನ್ಮಾನ್ಯ ಜಿ. ಎಸ್. ಇಂದಿರಾ



ಸನ್ಮಾನ್ಯ ನರಸು ರಾಮಚಂದ್ರ



ಸನ್ಮಾನ್ಯ ಪ್ರಶಾಂತ್ ಕುಮಾರ್



ಸನ್ಮಾನ್ಯ ಟಿ. ಎಸ್. ರಮೇಶ್

ಛಾಯಾಗ್ರಹಣ : ಕೆ. ಸಿ. ನಟರಾಜನ್

ಸರ್ವಸದಸ್ಯರ ಸಭೆ (26-07-2026)



ಸನ್ಮಾನ್ಯ ಸತ್ಯಪ್ರಸಾದ್ (ಮತ್ತು ಶ್ರೀಮತಿ ನಾಗರತ್ನ)



ಸನ್ಮಾನ್ಯ ಎಸ್. ಸೋಮಸುಂದರ (ಮತ್ತು ಶ್ರೀಮತಿ ಜಯಶ್ರೀ)



ಸನ್ಮಾನ್ಯ ಬಿ. ಸುಬ್ರಹ್ಮಣ್ಯಂ (ಮತ್ತು ಶ್ರೀಮತಿ ನಳಿನಿ)

ಛಾಯಾಗ್ರಹಣ : ಕೆ. ಸಿ. ನಟರಾಜನ್

ಹಿರಿಯ ಚೇತನರಿಗೆ ಗೌರವ (26-07-2026)



ಸನ್ಮಾನ್ಯ ಕರ್ನಲ್ ವಿ. ಜಿ. ರಾಜನ್ (ಮತ್ತು ಶ್ರೀಮತಿ ಪದ್ಮಿನಿ)



ಸಭಿಕವರ್ಗ



ಸಭಿಕವರ್ಗ

ಛಾಯಾಗ್ರಹಣ : ಕೆ. ಸಿ. ನಟರಾಜನ್

ಪ್ರತಿಭಾ ಪುರಸ್ಕಾರ (26-07-2026)



ವಾಗ್ದೇವಿ ಎಸ್.ಪಿ., ಶ್ರದ್ಧಾ ರಾಜಾಪುರ, ನಿತ್ಯಶ್ರೀ ಅನಂತ್



ದ್ರುಪದ್ ಚಂದ್ರ, ಸಮರ್ಥ್ ಆರ್.



ಆದಿತ್ಯ ರಾಮ್, ವಿವೇಕ್ ಎನ್., ಪೂಜಾ ಆರ್.ಎಂ.

ಛಾಯಾಗ್ರಹಣ : ಕೆ. ಸಿ. ನಟರಾಜನ್

ಪ್ರತಿಭಾ ಪುರಸ್ಕಾರ (26-07-2026)



ಅಭಯ್ ಎಸ್., ಹರ್ಷಿತ ಎಂ., ತನ್ಮಯ್ ಆರ್.ಎಂ., ಸಾಯಿ ರಾಘವ್ ವಿಶ್ವೇಶ್



ಅಖಿತ ಎಂ., ಮಾನಸ ಬಿ.ಎನ್.



ಅಶ್ವಿನಿ ವೆಂಕಟೇಶ್, ಶ್ರೇಯಸ್ ಆರ್., ಗೌತಮ್ ಎನ್.

ಛಾಯಾಗ್ರಹಣ : ಕೆ. ಸಿ. ನಟರಾಜನ್

ಸರ್ವಸದಸ್ಯರ ಸಭೆ (26-07-2026)



ಶ್ರೀ ಬಿ. ಎನ್. ಗೋವಿಂದಪ್ರಸಾದ್



ವಂದನಾರ್ಪಣೆ



ಕಾರ್ಯಕ್ರಮ ನಿರೂಪಣೆ

ಹಿರಿಯ ಚೇತನರಿಗೆ ಗೌರವ ಸಮರ್ಪಣೆ



ಸನ್ಮಾನ್ಯ ಸರಸ್ವತಿ ರಾಮಚಂದ್ರನ್



ಸನ್ಮಾನ್ಯ ರಾಮನ್ ರಮೇಶ್



ಸಂಘದ ಹಿರಿಯ ಹಿತೈಷಿ ಮತ್ತು ದಾನಿ ಶ್ರೀಮತಿ ವೈಜಯಂತಿ ಅವರಿಗೆ ಸಂಘವು ಕೃತಜ್ಞತಾ ಪೂರ್ವಕವಾಗಿ ಗೌರವ ಸಲ್ಲಿಸಿತು.

ಛಾಯಾಗ್ರಹಣ : ಕೆ. ಸಿ. ನಟರಾಜನ್

ಸರ್ವಸದಸ್ಯರ ಸಭೆ – ಭೋಜನ ಸಮಯ





ಸಾಧನೆ



ಸಂಘದ ಸದಸ್ಯೆ ಶ್ರೀಮತಿ ಗೌರಿ ನಟರಾಜ ಅವರಿಗೆ ವಿದ್ಯಾ ಪ್ರಸರಣ ಮತ್ತು ಶೈಕ್ಷಣಿಕ ಕ್ಷೇತ್ರದಲ್ಲಿ ಅವರಿಂದ ಲಭ್ಯವಾಗಿರುವ ಮಾರ್ಗದರ್ಶಕತ್ವಕ್ಕಾಗಿ ಬಿ.ಎಂ.ಎಸ್. ಅಕಾಡೆಮಿ ಆಫ್ ಪ್ರೊಫೆಷನಲ್ ಕೋರ್ಸಸ್ ಸಂಸ್ಥೆಯು 18–09–2026 ರಂದು "ದ್ರೋಣಾಚಾರ್ಯ" ಪ್ರಶಸ್ತಿ" ಯನ್ನು ನೀಡಿ ಗೌರವಿಸಿದೆ.

ಹಿರಿಯ ಚೇತನರಿಗೆ ಗೌರವ (26-07-2026)



ಶ್ರೀಮತಿ ಲೀಲಾ (ಮತ್ತು ಶ್ರೀ ಗುಂಡಪ್ಪ)



ಶ್ರೀಮತಿ ಮೀನಾ ಮಣಿ




ಶ್ರೀಮತಿ ಪದ್ಮ



ಶ್ರೀಮತಿ ಶಾಂತ

ಜನ್ಮ ಶತಮಾನೋತ್ಸವ – ಸ್ಮರಣಾಂಜಲಿ



ಈಚೆಗೆ ಬೃಹಚ್ಚರಣ ಪರಿವಾರವೊಂದರಲ್ಲಿ ಒಂದು ಅರ್ಥಪೂರ್ಣವಾದ ಸಮಾರಂಭವು ಜರುಗಿತು.

ಹೊಸಳ್ಳಿ–ಸರ್ಜಾಪುರಕ್ಕೆ ಸೇರಿದ ನಮ್ಮ ಬಂಧುಗಳೆಲ್ಲ ಬೆಂಗಳೂರಿನಲ್ಲಿ ಈ ವರ್ಷದ ಸೆಪ್ಟೆಂಬರ್ ತಿಂಗಳು 6ನೇ ತಾರೀಖು ಭಾನುವಾರದಂದು ಒಂದೆಡೆ ಕಲೆತು ತಮ್ಮ ಪರಿವಾರದ ಹಿರಿಯರಾಗಿದ್ದ ದಿ॥ ಶ್ರೀ ಸತ್ಯಮೂರ್ತಿಗಳ ಜನ್ಮಶತಮಾನೋತ್ಸವದ ಸಂದರ್ಭದಲ್ಲಿ ಶ್ರೀಯುತರನ್ನು ನೆನಪಿಸಿಕೊಂಡರು. ಶ್ರೀಯುತರ ಪತ್ನಿ ಶ್ರೀಮತಿ ಸುಬ್ಬುಲಕ್ಷ್ಮಿ ಅವರ ಉಪಸ್ಥಿತಿಯಲ್ಲಿ ಈ ಸಮಾರಂಭವು ಜರುಗಿತು.

ಸಂಪ್ರದಾಯದಂತೆ ದೇವತಾ ಪ್ರಾರ್ಥನೆಯಿಂದ ಪ್ರಾರಂಭವಾದ ಈ ಕಾರ್ಯಕ್ರಮದ ವಿಶೇಷ ಶ್ರೀ ಸತ್ಯಮೂರ್ತಿಗಳನ್ನು ಸ್ಮರಿಸಿಕೊಂಡು ಅವರ ಪರಿವಾರದವರು ಬರೆದ ಲೇಖನಗಳು 'ಸ್ಮರಣಾಂಜಲಿ' ಎಂಬ ಪುಸ್ತಕರೂಪದಲ್ಲಿ ಪ್ರಕಟವಾದದ್ದು. ದಿವಂಗತರನ್ನು ಸನಿಹದಿಂದ ಬಲ್ಲವರು, ಅವರ ಬಗ್ಗೆ ನೇರವಾಗಿ ತಿಳಿದಿಲ್ಲದವರು ಎಲ್ಲರದೂ ಸೇರಿದಂತೆ ಲೇಖನಗಳು ಪ್ರಕಟವಾಗಿವೆ. ಎಲ್ಲರೂ ಶ್ರೀ ಸತ್ಯಮೂರ್ತಿಗಳ ವ್ಯಕ್ತಿತ್ವದ ಭಾಗವಾಗಿದ್ದ ಸದ್ಗುಣಗಳನ್ನು ಲೇಖನಗಳ ಮೂಲಕ ಭಾವಪೂರ್ಣವಾಗಿ ನೆನಪಿಸಿಕೊಂಡಿದ್ದಾರೆ. ದಿವಂಗತರ ಶ್ರೀಮತಿಯವರಾದ ಸುಬ್ಬುಲಕ್ಷ್ಮಿಯವರು ಈ "ಸ್ಮರಣಾಂಜಲಿ"ಯನ್ನು ಬಿಡುಗಡೆ ಮಾಡಿದರು.

ಇದಲ್ಲದೇ ಶ್ರೀಯುತರಿಗೆ ಸಂಬಂಧಿಸಿದಂತೆ ಛಾಯಾಚಿತ್ರಗಳ slide show ಮತ್ತು ಪರಸ್ಥಳದಲ್ಲಿರುವ ಕೆಲವರು ತಮ್ಮ ಅನಿಸಿಕೆಗಳನ್ನು ಪ್ರಸ್ತುತಪಡಿಸಿ ಹಂಚಿಕೊಂಡ ವಿಡಿಯೋ ಕ್ಲಿಪ್ ಗಳು ಅಂದು ಪ್ರದರ್ಶಿತವಾದವು.

ಈ 'ಸ್ಮರಣಾಂಜಲಿ' ಯ ಪ್ರಕಟಣೆಗೆ ಕಿರುಸೇವೆ ಸಲ್ಲಿಸಿದ್ದ ಈ ಲೇಖಕನನ್ನು ವೇದಿಕೆಗೆ ಆಹ್ವಾನಿಸಿ ಆದರಪೂರ್ವಕವಾಗಿ ಗೌರವಿಸಲಾಯಿತು.

ಹೊಸಳ್ಳಿ–ಸರ್ಜಾಪುರ ಪರಿವಾರದ ಯುವ ಸದಸ್ಯರು ಈ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ರೂಪಿಸಿ ನಡೆಸಿಕೊಟ್ಟರು.

ಕಾರ್ಯಕ್ರಮವು ನಮ್ಮ ಸಂಸ್ಕೃತಿ – ಸಂಪ್ರದಾಯಗಳಿಗೆ ಅನುಗುಣವಾಗಿ ಒಂದು ಸಂಗೀತ ಕಾರ್ಯಕ್ರಮ ಮತ್ತು ಸಹಭೋಜನದಿಂದ ಸಂಪನ್ನಗೊಂಡಿತು.

ಬಿ. ಸುಬ್ರಹ್ಮಣ್ಯಂ
9449869667



ಶ್ರೀಮತಿ ಮತ್ತು ಶ್ರೀ ಸತ್ಯಮೂರ್ತಿಗಳ 60ನೇ ವಿವಾಹ ವಾರ್ಷಿಕೋತ್ಸವ



ಸಂಘದ ಹಿರಿಯ ಸದಸ್ಯ ಶ್ರೀ ಜಿ. ಎಸ್. ಸತ್ಯಮೂರ್ತಿ ಹಾಗೂ ಶ್ರೀಮತಿ ರತ್ನ ಸತ್ಯಮೂರ್ತಿ ಅವರ ವಿವಾಹದ 60 ನೇ ವಾರ್ಷಿಕೋತ್ಸವ ಬೆಂಗಳೂರಿನಲ್ಲಿ ಕುಟುಂಬ–ಪರಿವಾರ ವರ್ಗದವರ, ಬಂಧು ಮಿತ್ರರ ಸಮ್ಮುಖದಲ್ಲಿ ಶನಿವಾರ 5 ನೇ ಸೆಪ್ಟೆಂಬರ್ 2026 ರಂದು ಸಡಗರದಿಂದ ನೆರೆವೇರಿತು. ಆಗಮಿಸಿದ ಆಹ್ವಾನಿತರಲ್ಲರೂ ಹಿರಿಯ ದಂಪತಿಗಳಿಗೆ ಗೌರವಪೂರ್ವಕ ಅಭಿನಂದನೆಗಳನ್ನು ಸಲ್ಲಿಸಿದರು. ಈ ಸಂದರ್ಭದಲ್ಲಿ ಶ್ರೀಯುತರ ಆಪ್ತ ಮಿತ್ರರು ಮಾತನಾಡಿ ಅವರ ಸ್ನೇಹ, ಸಹಾಯ ಹಾಗೂ ಸಾಹಿತ್ಯ ಆಸಕ್ತಿಗಳನ್ನು ಶ್ಲಾಘಿಸಿದರು. ಅವರ ಕುಟುಂಬವರ್ಗದವರು ಮಾತನಾಡಿ ಹಿರಿಯರಿಗೆ ಗೌರವ ಸಲ್ಲಿಸಿದರು.

ಶ್ರೀ ಸತ್ಯಮೂರ್ತಿ ಅವರು ಪ್ರತಿಕ್ರಯಿಸುತ್ತಾ ಪರಿವಾರವರ್ಗದವರಿಗೆ ಹಾಗೂ ಹಾಜರಾದ ಎಲ್ಲ ಆಹ್ವಾನಿತರಿಗೆ ಧನ್ಯವಾದಗಳನ್ನು ಅರ್ಪಿಸಿದರು. ಜೊತೆಗೆ ತಮ್ಮ ಜೀವನದ ಕೆಲವು ಸಿಹಿನೆನಪುಗಳನ್ನು ಹಂಚಿಕೊಂಡರು.

ಈ ಅಪರೂಪದ ಕಾರ್ಯಕ್ರಮ ರುಚಿಯಾದ ಭೋಜನದೊಂದಿಗೆ ಸಂಪನ್ನವಾಯಿತು. ನಮ್ಮ ಹಿರಿಯ ಬಂಧುಗಳಾದ ಶ್ರೀ ಸತ್ಯಮೂರ್ತಿ ದಂಪತಿಗಳ ಆರೋಗ್ಯ ಹಾಗೂ ಶಾಂತಿಪೂರ್ಣ, ನೆಮ್ಮದಿಯುಕ್ತ ಜೀವನವನ್ನು ಹಾರೈಸುತ್ತೇನೆ.



ಕೆ. ಚಂದ್ರಶೇಖರ್
9448620010

ಪ್ರತಿಭೆ



ಸಂಘದ ಸದಸ್ಯೆ ಶ್ರೀಮತಿ ಕೆ. ಸರಸ್ವತಿ ಅವರ ಪುತ್ರ ಚಿ॥ ಗೌತಮ್ ಅವರು 2025–26 ನೇ ಶೈಕ್ಷಣಿಕ ವರ್ಷದಲ್ಲಿ ಪಿ.ಇ.ಎಸ್. ವಿಶ್ವವಿದ್ಯಾಲಯದಿಂದ ಉತ್ತಮ ಶ್ರೇಣಿಯಲ್ಲಿ M.Tech. (Data Science & Machine Learning) ಪದವಿಯನ್ನು ಗಳಿಸಿರುವರು.



ಸಂಘದ ಸದಸ್ಯ ಶ್ರೀ ರವಿಶಂಕರ್ ಅವರ ಪತ್ನಿ ಶ್ರೀಮತಿ ಮಾಲತಿ ರವಿಶಂಕರ್ ಅವರು ಶಿಕ್ಷಣಕ್ಷೇತ್ರದಲ್ಲಿ ಸಲ್ಲಿಸಿರುವ ಸೇವೆಗಾಗಿ World Cultural and Educational Organisation ಸಂಸ್ಥೆಯ ಗೌರವ ಡಾಕ್ಟರೇಟ್ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಗೌರವ ಸಮರ್ಪಣೆ



ಯಗಟಿಯ ಶ್ರೀ ವೀರಾಂಜನೇಯ ದೇವಾಲಯ ಕ್ಷೇತ್ರದಲ್ಲಿ ಸಲ್ಲಿಸುತ್ತಿರುವ ಸೇವೆಗಾಗಿ ಸಂಘದ ಸದಸ್ಯ ಶ್ರೀ ಕೆ.ಟಿ. ನಾಗರಾಜ್ ಅವರಿಗೆ ಆ ಕ್ಷೇತ್ರದ ವಿಶ್ವಸ್ಥ ಸಮಿತಿಯು ಗೌರವ ಸಲ್ಲಿಸಿತು.



ಸಂಘದ ಹಿರಿಯ ಸದಸ್ಯರಾದ ಶ್ರೀ ಆರ್. ಎಸ್ ಪದ್ಮನಾಭ ಮತ್ತು ಶ್ರೀಮತಿ ತಂಗಮಣಿ ದಂಪತಿಗಳನ್ನು ಬಸವೇಶ್ವರನಗರ ಬ್ರಾಹ್ಮಣ ಸಂಘದವರು ಸನ್ಮಾನಿಸಿದರು. ಭಗವಂತನು ಈ ಹಿರಿಯ ದಂಪತಿಗಳಿಗೆ ಆಯುರಾರೋಗ್ಯ ಕರುಣಿಸಲಿ ಎಂದು ಭಗವಂತನಲ್ಲಿ ಪ್ರಾರ್ಥಿಸೋಣ.

ಅನನ್ಯ ಪ್ರತಿಭೆಯ ಸ. ವೆಂಕಟಾಚಲಪತಿ

ಬೃಹಚ್ಚರಣ ಐಯ್ಯರ್ ಸಮುದಾಯದ ತಂಜಾವೂರಿನ ಮಂಜಪತ್ತೂರಿನಿಂದ ಸರ್ಜಾಪುರಕ್ಕೆ ಹಾಗೂ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಬಂದು ನೆಲೆಸಿದಂತಹ ಒಂದು ಕುಟುಂಬಕ್ಕೆ ಸೇರಿದವರು ಸರ್ಜಾಪುರ ವೆಂಕಟಾಚಲಪತಿಯವರು.

ಇವರ ತಂದೆ ಗೋಪಾಲರಾಯರು ಅಂದಿನ ವಸಾಹತುಶಾಹಿ (colonial) ಕಾಲದಲ್ಲಿ ಪೋಸ್ಟ್ ಮಾಸ್ಟರ್ ಆಗಿದ್ದವರು. ಇವರ ತಾಯಿ ಸುಬ್ಬಮ್ಮ ಶಾವಕನಹಳ್ಳಿ ಹೆಣ್ಣುಮಗಳು. ಅಂದಿನ ಕಾಲಮಾನದಲ್ಲಿ ಸುಬ್ಬಮ್ಮನವರು ಕನ್ನಡ ಭಾಷೆಯನ್ನು ಓದಲು ಬರೆಯಲು ತಮ್ಮ ಪತಿಯಿಂದ ಕಲಿತಿದ್ದರು.

ಗೋಪಾಲರಾಯರು ಬ್ರಹ್ಮಚೈತನ್ಯ ಅವರ ಅನುಯಾಯಿಗಳಾಗಿದ್ದರಿಂದ ಹಾಗೂ ಸಾಹಿತ್ಯ, ಸಂಗೀತಗಳಲ್ಲಿ ಆಸಕ್ತಿ ಹಾಗೂ ಅಭಿರುಚಿಯನ್ನು ಹೊಂದಿದ್ದರಿಂದ ಅನೇಕ ಕೃತಿಗಳನ್ನು ರಚಿಸಿದ್ದರು. ದುರದೃಷ್ಟವಶಾತ್ ಅವು ಯಾವುವೂ ಈಗ ನಮ್ಮಲ್ಲಿ ಇಲ್ಲ. ಇಂತಹ ತಂದೆ ತಾಯಿಯ ಮೂರನೆಯ ಮಗ ವೆಂಕಟಾಚಲಪತಿಯವರು. ಇವರ ಹಿರಿಯ ಅಣ್ಣಂದಿರಾದ ಲಕ್ಷ್ಮೀಪತಿ ಹಾಗೂ ಶ್ರೀನಿವಾಸ ಮೂರ್ತಿಗಳ ಪ್ರೀತಿಯ ತಮ್ಮ. ಬಾಲ್ಯದಲ್ಲಿ ಬಹಳ ಅಂದಗಾರ, ಸೊಗಸುಗಾರ ಮಗುವಾಗಿದ್ದ ಕಾರಣ ತಂದೆತಾಯಂದಿರು ಇವರನ್ನು ಪುತ್ಥಳಿ ಎಂದು ಕರೆಯುತ್ತಿದ್ದರು. ಅದು ಮುಂದೆ ಅಪಭ್ರಂಶವಾಗಿ ತಾಯಿ, ಅಣ್ಣ ತಮ್ಮಂದಿರಿಗೆ ಮತ್ತು ಮನೆಯ ಮಕ್ಕಳಿಗೆ ಪುಟ್ಟಿ, ಪುಟ್ಟಿ ಚಿಕ್ಕಪ್ಪ ಆಯಿತು. ಅತ್ಯಂತ ಸ್ಫುರದ್ರೂಪಿ ಮತ್ತು ಎತ್ತರದ ನಿಲುವು, ಕರೀಟೋಪಿ, ಖಾದಿ ಕೋಟು, ಖಾದಿ ಜುಬ್ಬಾ, ಕಚ್ಚೆಪಂಚೆ ಉಟ್ಟುಕೊಂಡು ಕೈಯಲ್ಲಿ ಕೊಡೆ ಹಿಡಿದು ನಡೆದು ಬರುತ್ತಿದ್ದ ಆ ಠೀವಿ ನೋಡಲಸದಳ!

ಇವರು ಮೈಸೂರು ವಿಶ್ವವಿದ್ಯಾಲಯದ B.A. ಪದವಿಯನ್ನು ಅಂದಿನ ಕಾಲದಲ್ಲೇ ಪಡೆದಿದ್ದರು. ಆ ಸಮಯದಲ್ಲಿ ಟಿ. ಎಸ್. ವೆಂಕಣ್ಣಯ್ಯನವರನ್ನು ಹಾಗೂ ಎ. ಆರ್ ಕೃಷ್ಣಶಾಸ್ತ್ರಿಗಳನ್ನು ಗುರುಗಳನ್ನಾಗಿ ಪಡೆದಿದ್ದ ಸುಕೃತ ಶ್ರೀಯುತರದು.

ಇಷ್ಟು ಹೊತ್ತಿಗೆ ಮೂರು ಜನ ಅಣ್ಣ ತಮ್ಮಂದಿರು ತಮ್ಮ ತಾಯಿಯೊಂದಿಗೆ ಬೆಂಗಳೂರಿಗೆ ಬಂದು ನೆಲೆಸಿದ್ದರು. ಲಕ್ಷ್ಮೀಪತಿಯವರು ಅಂಚೆ ಇಲಾಖೆಯಲ್ಲಿ ಮತ್ತು ಶ್ರೀನಿವಾಸ ಮೂರ್ತಿಗಳು ಫೋರ್ಟ್ ಹೈಸ್ಕೂಲ್‌ನಲ್ಲಿ / ನ್ಯಾಷನಲ್ ಹೈಸ್ಕೂಲ್‌ನಲ್ಲಿ ಉದ್ಯೋಗ ಮಾಡುತ್ತಿದ್ದರು. ಕಡೆಯವರಾದ ನನ್ನ ತಾತ ಸಾಹಿತ್ಯದಲ್ಲಿ ಬಹಳ ಅಭಿರುಚಿ ಹೊಂದಿದ್ದು ಕನ್ನಡ, ಸಂಸ್ಕೃತ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ಸಮಾನ ಪ್ರಭುತ್ವವನ್ನು ಪಡೆದಿದ್ದರು. ಇದನ್ನು ಕಂಡುಕೊಂಡ ಇವರ ಅಣ್ಣ ಶ್ರೀನಿವಾಸ ಮೂರ್ತಿಗಳು ಇವರ ಮುಂದೆ ಎರಡು ಆಯ್ಕೆಗಳನ್ನು ಇಟ್ಟರು. ಒಂದು ಪ್ರಶಾಂತವಾದ ವಾತಾವರಣ ಸರ್ಜಾಪುರ ಕ್ಕೆ ಹೋಗಿ ಅಲ್ಲಿ ಇದ್ದ ಸ್ವಲ್ಪ ಭೂಮಿ – ಕಾಣಿ ನೋಡಿಕೊಂಡು ಸಾಹಿತ್ಯ ಕೃಷಿಯನ್ನು ಮುಂದುವರೆಸುವುದು, ಇಲ್ಲ, ಧಾರವಾಡಕ್ಕೆ ಹೋಗಿ ಮನೋಹರ ಗ್ರಂಥಮಾಲದಲ್ಲಿ ಅದರ ಸಂಸ್ಥಾಪಕರಾದ ಜಿ. ಬಿ. ಜೋಷಿ (ಜಡಭರತ ಕಾವ್ಯನಾಮ) ಅವರ ಜೊತೆಯಲ್ಲಿ ಕೆಲಸ ಮಾಡುವುದು.

ಶ್ರೀಯುತರು ತಮ್ಮ ಪತ್ನಿ ಸರೋಜಮ್ಮ (ಹೊಸಕೋಟೆಯ ಹೆಣ್ಣುಮಗಳು) ಅವರ ಜೊತೆಯಲ್ಲಿ ಧಾರವಾಡಕ್ಕೆ ಹೋಗಿ ಜೋಷಿಯವರೊಂದಿಗೆ ಸ್ವಲ್ಪ ಕಾಲ ಕೆಲಸ ಮಾಡಿದರು. ಕೆಲವು ವರ್ಷಗಳ ನಂತರ ಅಲ್ಲಿಂದ ಬೆಂಗಳೂರಿಗೆ ವಾಪಸಾದರು. ಇಷ್ಟು ಹೊತ್ತಿಗೆ ಬೃಹಚ್ಚರಣ ಸಮುದಾಯದ ಪಿತಾಮಹರಾದ ಡಾ. ಡಿ. ವಿ. ಗುಂಡಪ್ಪನವರು ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯನ್ನು ಸ್ಥಾಪಿಸಿದ್ದರು. ಅದರ ಮೂಲಕ ಡಿವಿಜಿಯವರು ಅನೇಕ ಸಾಹಿತ್ಯಕ ಚಟುವಟಿಕೆಗಳು, ಉಪನ್ಯಾಸಗಳು, ಸಂಘಟನೆಗಳು, ಸಂಗೀತ, ಸಾಹಿತ್ಯ ಕಾರ್ಯಕ್ರಮಗಳು, ವ್ಯಾಸ, ವಾಲ್ಮೀಕಿ ಜಯಂತಿ ಮೊದಲಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಬೆಂಗಳೂರನ್ನು ದಕ್ಷಿಣದ ಒಂದು ಪ್ರಮುಖ ಸಾಂಸ್ಕೃತಿಕ ಕೇಂದ್ರವನ್ನಾಗಿಸಿ ಸಂಸ್ಥೆಯನ್ನು ನಡೆಸಿಕೊಂಡು ಬರುತ್ತಿದ್ದರು. ಸ. ವೆಂಕಟಾಚಲಪತಿಯವರು ಡಾ॥ ಡಿವಿಜಿ ಅವರೊಂದಿಗೆ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಗೆ ಸೇರ್ಪಡೆಗೊಂಡು ಕ್ರಮೇಣ ಆ ಸಂಸ್ಥೆಯ ಒಂದು ಅವಿಭಾಜ್ಯ ಅಂಗವಾಗಿ ರೂಪುಗೊಂಡರು.

ಈ ಒಂದು ಸಮ್ಮಿಳನದಿಂದ ಮನೆ ಮಕ್ಕಳಾದ ನಮಗೆ ಬಾಲ್ಯದಿಂದಲೇ ಸಾಹಿತ್ಯ ಲೋಕದ ದಿಗ್ಗಜರಾದ ಡಾ. ಡಿವಿಜಿ, ಎ.ಆರ್. ಕೃಷ್ಣ ಶಾಸ್ತ್ರಿಗಳು, ಮಾಸ್ತಿ ವೆಂಕಟೇಶ ಅಯ್ಯಂಗಾರ್, ವಿ. ಸೀತಾರಾಮಯ್ಯನವರು, ಎಮ್.ವಿ. ಸೀತಾರಾಮಯ್ಯನವರು, ಬಿ. ಪುಟ್ಟಸ್ವಾಮಯ್ಯನವರು, ಸಂಪತ್ಗಿರಿರಾಯರು ಇವರುಗಳ ಸಾನಿಹ್ಯ ಲಭಿಸಿತು. ಇವರೆಲ್ಲರ ಸಂಪರ್ಕದಿಂದ ಮನೆಯ ಮಕ್ಕಳಾದ ನಮ್ಮೆಲ್ಲರ ಜೀವನ ಸಮೃದ್ಧವಾಯಿತು. ಇವರ ಸಾಹಿತ್ಯದಲ್ಲಿನ ಗಾಢವಾದ ಆಸಕ್ತಿ ನಮ್ಮೆಲ್ಲರಿಗೂ ಸಾಹಿತ್ಯದೆಡೆಗೆ ಒಲವು ಮೂಡುವಂತೆ ಮಾಡಿತು.

ಮನೆ ಮಕ್ಕಳಿಗೆ ಓದಿನಲ್ಲಿ ಹಾಗೂ ಸಾಹಿತ್ಯದಲ್ಲಿ ಆಸಕ್ತಿ ಮೂಡಿಸುವ ಸಲುವಾಗಿ ಮನೆಯ ಹಿರಿಯರು ಕಿರಿಯರಿಗಾಗಿ ಪ್ರಕಟವಾಗುತ್ತಿದ್ದ ಪುಸ್ತಕಗಳನ್ನು ತಂದುಕೊಟ್ಟು ಓದಲು ಹುರಿದುಂಬಿಸುತ್ತಿದ್ದರು. ತಾತ ನನ್ನನ್ನು ಪಕ್ಕದಲ್ಲಿ ಕೂಡಿಸಿಕೊಂಡು ದೊಡ್ಡವರು ಓದುವಂತಹ ಒಳ್ಳೊಳ್ಳೆಯ ಪುಸ್ತಕಗಳನ್ನೆಲ್ಲಾ ನನಗೂ ಕೊಟ್ಟು ಉತ್ತೇಜನ ನೀಡಿ ನನ್ನ ಸಾಹಿತ್ಯಾಸಕ್ತಿಗೆ ನೀರೆರೆದರು.

ಮೊಮ್ಮಗಳು ರಾಜಲಕ್ಷ್ಮಿ ಆಂಗ್ಲ ಭಾಷೆಯಲ್ಲಿ ಸ್ನಾತಕೋತ್ತರ ವ್ಯಾಸಂಗ ಮಾಡುವಾಗ ತಾತ ಅದೆಷ್ಟು ಉತ್ಸಾಹದಿಂದ N. R. ಕಾಲೋನಿಯಿಂದ ಬ್ರಿಟಿಷ್ ಲೈಬ್ರೆರಿ, ಗಂಗಾರಾಂ ಬುಕ್ ಬ್ಯೂರೋ, ಹಿಗ್ಗಿನ್ ಬಾತಂಸ್ ಸೆಲೆಕ್ಟ್ ಬುಕ್ ಹೌಸ್ ಗಳಿಗೆ ಅವಳ ಸಿಲೆಬಸ್ ಕಾಪಿಯನ್ನು ತೆಗೆದುಕೊಂಡು ಕಾಲುನಡಿಗೆಯಲ್ಲೇ ಹೋಗಿ ಅವಳಿಗೆ ಬೇಕಾದ ಪುಸ್ತಕಗಳನ್ನು ತಂದುಕೊಡುತ್ತಿದ್ದರು! ಹಾಗೇ ಆ ಪುಸ್ತಕಗಳನ್ನು ತಾವೂ ಅವಳ ಜೊತೆ ಓದಿ ಅವಳಿಗೆ ಅರ್ಥವಾಗುವಂತೆ ನೋಟ್ಸ್ ತಯಾರಿಸಿ ಕೊಡುತ್ತಿದ್ದುದು ನೆನಪಿದೆ. ಅವಳು ಮತ್ತು ನಾನು, ನಮ್ಮ ಜೀವನದ ಮಹತ್ತರ ಗಳಿಗೆಗಳನ್ನು ಅವರ ಸಾನ್ನಿಧ್ಯದಲ್ಲಿ ಕಂಡುಕೊಂಡು ಧನ್ಯರಾದೆವು.

ಇಷ್ಟು ಅಲ್ಲದೇ ಅವರ ಸಾಹಿತ್ಯ ಕೃಷಿಯಲ್ಲಿ ಹೊರಬಂದಿರುವ ಪುಸ್ತಕಗಳು, ಭಾಷ್ಯಗಳು, ಅನುವಾದಗಳು ಸಾಹಿತ್ಯ ಕ್ಷೇತ್ರಕ್ಕೆ ಅವರು ಕೊಟ್ಟ ಬಹಳ ಪ್ರಮುಖ ಕೊಡುಗೆ ಮತ್ತು ಮಹತ್ತರವಾದ ಅವರ ಬರವಣಿಗೆ. ಬೆಳಕು ಕಾಣದೇ, ಮುದ್ರಣಗೊಳ್ಳದೇ ಇರುವ ಕರಡು ಪ್ರತಿಗಳು ನನಗೆ ಶ್ರೇಷ್ಯವಾದ ಆಸ್ತಿಯಂತೆ ನನ್ನಲ್ಲಿ ಉಳಿದಿದೆ.

ಅವರ ಪ್ರಕಟಗೊಂಡ ಮುಖ್ಯವಾದ ಪುಸ್ತಕಗಳು :

* ರಾಮಕೃಷ್ಣ ಆಶ್ರಮದ ಪ್ರಕಟಣೆ : Christopher Isherwood ನ Ramakrishna and his Disciples ಕನ್ನಡ ಅನುವಾದ "ರಾಮಕೃಷ್ಣರು ಮತ್ತು ಅವರ ಶಿಷ್ಯರು"
* ಮೈಸೂರು ಮಹಾರಾಜರಾಗಿದ್ದ ಜಯಚಾಮರಾಜೇಂದ್ರ ಒಡೆಯರ್ ಅವರ ಆಂಗ್ಲ ಭಾಷೆಯ ಕೃತಿ "ದತ್ತಾತ್ರೇಯ"ದ ಕನ್ನಡದ ಅನುವಾದ.
* ನಾರಾಯಣೀಯಂ ಅಂತಹ ಕ್ಲಿಷ್ಟಕರವಾದ ಗ್ರಂಥವನ್ನು ಭಾಷ್ಯ ಸಹಿತ ಕನ್ನಡಕ್ಕೆ ತಂದ ಹೆಗ್ಗಳಿಕೆ
* ಉಮಾ ಸಹಸ್ರ ಕಾವ್ಯ : ಇದರ ಭಾಷ್ಯ ಮತ್ತು ಅನುವಾದ ಕನ್ನಡದಲ್ಲಿ ಮಾಡಿರುತ್ತಾರೆ.
* Scott Nearing ಅವರ ಸಾರ್ಟಸ್ ರಿಸಾರ್ಟಸ್ ಕನ್ನಡ ಅನುವಾದ.
* Epictetus ಎಂಬ ಗ್ರೀಕ್ ಸ್ಥಿತಿಸ್ಥಾಪಕ (ಸಂಯಮಿ) ತತ್ವಶಾಸ್ತಜ್ಞ ಮಹಾಶಯ ರಚಿಸಿರುವ ದ Discourses ಅನ್ನುವ ಮಹಾನ್ ಗ್ರಂಥದ ಐದೂ ಭಾಗಗಳನ್ನು ಕನ್ನಡದಲ್ಲಿ, 'ಎಪಿಕ್ಟೀಟಸ್ ಮಹಾಶಯನ ಪ್ರವಚನಮಾಲೆ' ಅನುವಾದಿಸಿದ್ದಾರೆ. ಇದು ಇನ್ನೂ ಬೆಳಕು ಕಂಡಿಲ್ಲ.

ಅವರು ರಚಿಸಿರುವ ಇನ್ನೂ ಅನೇಕ ಪುಸ್ತಕಗಳು ದುರದೃಷ್ಟವಶಾತ್ ನಮ್ಮ ಬಳಿ ಇಲ್ಲ. ಇದಕ್ಕೆ ಕಾರಣ ನಮ್ಮ ಬೇಜವಾಬ್ದಾರಿತನವೋ ಅಥವಾ ಮೌಢ್ಯವೋ ಗೊತ್ತಿಲ್ಲ. ಅವರು ಬರೆದ ಬಹಳಷ್ಟು ಹಸ್ತಪ್ರತಿಗಳು ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯಲ್ಲೇ ಉಳಿದಿರಬಹುದು ಅಥವಾ ಇನ್ನು ಬೇರೆ ಸಂಸ್ಥೆಗಳಿಗೆ ಕೊಟ್ಟಿರಬಹುದು. ನಮ್ಮ ಮನೆಯಲ್ಲಿ ಇದ್ದ ಹಸ್ತಪ್ರತಿಗಳನ್ನು ನಾನು ಕಾಪಿಟ್ಟುಕೊಂಡಿದ್ದೇನೆ.

ನಮ್ಮ ತಾತನ ದೆಸೆಯಿಂದ ಎಲ್ಲಾ ಮೇರು ಸಾಹಿತಿಗಳು ಹಾಗೂ ಅವರ ಒಡನಾಟದಲ್ಲಿದ್ದು, ಮನೆಗೆ ಬರುತ್ತಿದ್ದರಿಂದ ಆ

ಹಿರಿಯ ಚೇತನರ ಸಂಪರ್ಕದ ಪುಣ್ಯ ನಮಗೆ ಲಭಿಸುತ್ತಿತ್ತು ಅಂದರೆ ಅತಿಶಯೋಕ್ತಿ ಅಲ್ಲ.

ವೆಂಕಟಾಚಲಪತಿಯವರು ತಮ್ಮ ಅಂತಿಮ ದಿನಗಳಲ್ಲಿ ತಮ್ಮ ಆತ್ಮೀಯರಾದ ನಿಟ್ಟೂರು ಶ್ರೀನಿವಾಸರಾಯರನ್ನು ನೋಡುವವರೆಗೂ ಜೀವ ಹಿಡಿದುಕೊಂಡಿದ್ದು ಅವರ ಸಾಹಿತ್ಯದ ಒಡನಾಟದ ಆ ಸ್ನೇಹದ ತುಡಿತದ ನಮಗೆ ಬೆರಗಾಗುವಂತೆ ಮಾಡಿತ್ತು. ಅವರ ಕೊನೆಯಾಸೆ ಆತ್ಮೀಯ ಸ್ನೇಹಿತರನ್ನು ನೋಡುವುದು ಮಾತ್ರ ಆಗಿತ್ತು. ಅವರು ಅದಕ್ಕಾಗಿ ಹಂಬಲಿಸುತ್ತಿದ್ದರು. ನಿಟ್ಟೂರು ಶ್ರೀನಿವಾಸರಾಯರು ಅವರಿಗಿಂತ ದೊಡ್ಡವರು ಶತಾಯುಷಿಗಳು. ಅವರು ಆಗತಾನೇ ಹುಷಾರು ತಪ್ಪಿ ಮಲಗಿದ್ದವರು. ಹೊರಗಿನ ಓಡಾಟಗಳನ್ನು ನಿಲ್ಲಿಸಿದ್ದರು. ಆದರೆ ಇವರ ಸ್ಥಿತಿಯನ್ನು ಕೇಳಿ ಅವರ ಮನೆಯವರು ಅವರನ್ನು ಕಾರ್‌ನಲ್ಲಿ ಕಳಿಸಿದರು. ಇಬ್ಬರೂ ಸುಮಾರು ಮೂರು ಗಂಟೆಗಳ ಕಾಲ ಮಾತನಾಡಿದರು. ರಾಯರು ಹೊರಟಾಗ ರಾತ್ರಿ ಹನ್ನೊಂದು ಹೊಡೆದಿತ್ತು. ಈರ್ವರ ಮುಖದಲ್ಲಿ ಅದೇನೋ ಒಂದು ವಿಶೇಷ ಖಳೆ ಮೂಡಿತ್ತು. ಅವರು ಹೊರಟ ಒಂದು ಅರ್ಧ ತಾಸಿನಲ್ಲೇ ತಾತನವರು ತಮ್ಮ ಇಹಯಾತ್ರೆಯನ್ನು ಮುಗಿಸಿದ್ದರು. ಅಂದು ಅವರಿಬ್ಬರ ನಡುವಣ ಸ್ನೇಹ ಸೌರಭದ ಮಾತುಕತೆಗೆ ನಾವು ಮೂಕ ಸಾಕ್ಷಿಗಳಾಗಿದ್ದೆವು. ಇದೊಂದು ಸನ್ನಿವೇಶ ನಮ್ಮನ್ನು ದಿಗ್ಮೂಢರನ್ನಾಗಿಸಿತ್ತು.



ರವಿ ಸರ್ಜಾಪುರ
9164549027

ಸಾಹಿತ್ಯದಲ್ಲಿ ಅಪಾರ ಕೃಷಿ ಮಾಡಿದ್ದರೂ ಎಲೆಮರೆಯ ಕಾಯಿಯಂತೆ ಬದುಕಿ ಬಾಳಿದ ನನ್ನ ಪಿತಾಮಹ ಕೀರ್ತಿಶೇಷ ಸ. ವೆಂಕಟಾಚಲಪತಿ ಅವರ ನೆನಪಿಗೆ ನಮಸ್ಕಾರಗಳು

ಓದುಗರ ಅನಿಸಿಕೆಗಳು

"ಬೃಹಚ್ಚರಣ" ದ 51ನೆಯ ಸಂಚಿಕೆ – ನನ್ನ ಅನಿಸಿಕೆ

"ಬೃಹಚ್ಚರಣ" ದ 51ನೆಯ ಈ ಸಂಚಿಕೆಯು ಇದರ ಹಿಂದಿನ ಸುವರ್ಣ ಸಂಚಿಕೆಯ ಕಿರಿಯ ಸಹೋದರಿಯಂತೆ ಮೂಡಿಬಂದಿದೆ.

ನಲವತ್ತೆಂಟು ಪುಟಗಳ ಈ ಹೊತ್ತಿಗೆಯಲ್ಲಿ ನಮ್ಮ ಧಾರ್ಮಿಕತೆಯ ಅಂಗಗಳಾದ ಆಚರಣೆಗಳ ನಿರೂಪಣೆ, ಹಿಂದಿನ ಬೃಹಚ್ಚರಣರ ವ್ಯಕ್ತಿತ್ವ, ಅವರುಗಳ ಜೀವನಶೈಲಿ, ಅಂತೆಯೇ ಇಂದಿನ ಬೃಹಚ್ಚರಣರ ಪ್ರತಿಭೆಗಳು, ಅವುಗಳಿಗೆ ಸಂದಿರುವ ಮನ್ನಣೆಗಳು ಅಚ್ಚುಕಟ್ಟಾಗಿ ಮೂಡಿಬಂದಿವೆ.

ವರ್ಷದಿಂದ ವರ್ಷಕ್ಕೆ ಸತತವಾಗಿ ಆಚರಣೆಯಲ್ಲಿರುವ ನಾಗಾರಾಧನೆಯ ಬಗೆಗಿನ ಚಿತ್ರಸಹಿತ ನಿರೂಪಣೆಯು ಧಾರ್ಮಿಕತೆಯ ಶ್ರೇಷ್ಠತೆಯನ್ನು ಎತ್ತಿಹಿಡಿದಿದೆ.



ಜಿ.ಎಸ್. ಸತ್ಯಮೂರ್ತಿ
9844469581

ಮುಖಪುಟದ ವಿನ್ಯಾಸ, ಲೇಖನಗಳ ಗುಣಮಟ್ಟ, ಛಾಯಾಚಿತ್ರಣ ಇವೆಲ್ಲ ಈ ಸಂಚಿಕೆಯ ಸೊಬಗನ್ನು ಹೆಚ್ಚಿಸಿವೆ.

ಇಂತಹ ಸಂಚಿಕೆಯನ್ನು ರೂಪಿಸಿ ಹೊರತಂದಿರುವ ಸಂಪಾದಕ ಮಂಡಲಿಯ ಶ್ರಮ ಸ್ತುತ್ಯರ್ಹ.

ಉದಾರ ಕೊಡುಗೆ



ದಿ॥ ಜಿ.ವಿ. ಶಾರದಮ್ಮ

ಸಂಘದ ಸದಸ್ಯ ಅನೇಕಲ್ ನಿವಾಸಿಯಾಗಿರುವ ಶ್ರೀ ಎನ್. ಶ್ರೀನಿವಾಸು ಅವರು ತಮ್ಮ ಮಾತೃಶ್ರೀ ದಿ॥ ಶ್ರೀಮತಿ ಶಾರದಮ್ಮನವರ ಗೌರವಪೂರ್ವಕ ನೆನಪಿನಲ್ಲಿ ಸಂಘವು ನಡೆಸಿಕೊಂಡುಬರುತ್ತಿರುವ ಅನ್ನಸಂತರ್ಪಣೆಗಾಗಿ 50,000/– ರೂ. ಗಳ ದೇಣಿಗೆಯನ್ನು ನೀಡಿರುತ್ತಾರೆ.

ಸಂಘವು ಶ್ರೀಯುತರ ಹೃದಯ ವೈಶಾಲ್ಯತೆಯಿಂದ ಕೂಡಿದ ಈ ಉದಾರ ದೇಣಿಗೆಯನ್ನು ಕೃತಜ್ಞತಾಪೂರ್ವಕವಾಗಿ ಸ್ವೀಕರಿಸುತ್ತದೆ ಮತ್ತು ಶ್ರೀಯುತರು ಮತ್ತು ಅವರ ಪರಿವಾರವರ್ಗಕ್ಕೆ ಭಗವಂತನು ಆಯುರಾರೋಗ್ಯ, ಮನಃಶಾಂತಿಗಳಿಂದ ಕೂಡಿದ ಉತ್ತಮ ಭವಿಷ್ಯವನ್ನು ಹಾರೈಸುತ್ತದೆ.

ಹಬ್ಬಗಳ ಸಾಲು

ಪ್ರಾರಂಭವಾಯಿತು ಹಬ್ಬಗಳ ಸಾಲು
ಬರುವುವು ಹಬ್ಬಗಳು ಸಾಲು ಸಾಲು ।
ಭಕ್ತಿಭಾವದಿ ಇವುಗಳ ಆಚರಿಸೋಣ
ಭಗವಂತನಾ ಕೃಪೆಗೆ ಪಾತ್ರರಾಗೋಣ ॥

ನಮ್ಮ ಮೊದಲನೆಯ ಹಬ್ಬ ಉಗಾದಿ
ಇದುವೇ ಹೊಸ ಸಂವತ್ಸರಕೆ ನಾಂದಿ ।
ಬೇವು ಬೆಲ್ಲವ ತಿಂದು ಎಲ್ಲರಿಗೆ ಹಂಚುವ
ಕಷ್ಟ ಸುಖ ಎರಡೂ ಒಂದೆಂದು ಸಾರುವ ॥

ನಂತರ ಬರುವ ಹಬ್ಬ ಶ್ರೀರಾಮನವಮಿ
ಭೂಭಾರ ಇಳಿಸಲು ಧರೆಗಿಳಿದ ಸ್ವಾಮಿ ।
ಶ್ರೀರಾಮನ ಧ್ಯಾನವನು ಮಾಡೋಣ ಎಲ್ಲ
ಅವನ ಕೃಪೆ ದೊರೆತರೆ ಪುನರ್ಜನ್ಮ ಇಲ್ಲ ॥

ನಾಗರಪಂಚಮಿ ಹಬ್ಬವೇ ಮೂರನೆಯದು
ನಾಗಪ್ಪನಿಗೆ ಭಕ್ತಿಯಿಂ ತನಿಯನ್ನು ಎರೆದು ।
ಸೋದರ ಸೋದರಿಯರು ಒಂದೆಡೆ ಕೂಡಿ
ಸಂತೋಷದಿಂ ನಲಿಯುವರು ನೋಡಿ ॥

ನಂತರ ಬರುವುದು ವರಲಕ್ಷ್ಮಿ ವ್ರತವು
ಸೌಭಾಗ್ಯ ಲಕ್ಷ್ಮಿಯು ಬರುವ ಶುಭದಿನವು ।
ಒಲಿದರೆ ಈಕೆ ದೂರವಾಗುವುದು ಆಪತ್ತು
ಮನೆಯಲ್ಲಿ ತುಂಬುವುದು ಧನ, ಧಾನ್ಯ, ಸಂಪತ್ತು ॥

ಮುಂದಿನಾ ಹಬ್ಬವೇ ಶ್ರೀಗೋಕುಲಾಷ್ಟಮಿ
ಶ್ರೀಕೃಷ್ಣ ಜನಿಸಲು ಪಾವನವಾಯ್ತು ಭೂಮಿ ।
ಈ ಲೋಕದಲಿ ದುಷ್ಟ ಶಿಕ್ಷಣ ಶಿಷ್ಟ ರಕ್ಷಣ
ಮಾಡಿದ ದೇವಾಧಿದೇವಗೆ ಆಗುವ ಶರಣ ॥

ತದನಂತರ ಆಗಮಿಸುವಳು ಗೌರಮ್ಮ
ಎಲ್ಲರನು ಹರಸಲು ಬರುವಳು ನಮ್ಮಮ್ಮ ।
ಅಮ್ಮನಾ ಹಿಂದೆಯೇ ಬರುವನು ಗಣಪತಿ
ವಿಘ್ನಗಳ ಕಳೆದು ನೀಡುವನು ಸನ್ಮತಿ ॥

ಭಾದ್ರಪದದ ಚತುರ್ದಶಿಯ ದಿನದಂದು
ಅನಂತಪದ್ಮನಾಭಸ್ವಾಮಿಯು ಮನೆಗೆ ಬಂದು ।
ಪೂಜೆಯನು ಸ್ವೀಕರಿಸಿ ನಮ್ಮ ಹರಸುವರು
ಅನಂತ ವರಗಳನು ಕರುಣಿಸುವರು ॥

ನಂತರವೆ ನವರಾತ್ರಿ, ಎಲ್ಲೆಡೆ ದಸರ
ಸತ್ಯ ಧರ್ಮಗಳ ವಿಜಯದಾ ಸಡಗರ ।
ಚಾಮುಂಡಿಯಿಂದ ಹತನಾದ ಮಹಿಷ
ಶ್ರೀರಾಮ ರಾವಣನ ಕೊಂದ ಶುಭದಿವಸ ॥

ಕಾರ್ತೀಕ ಮಾಸದಲಿ ಬರುವುದು ದೀಪಾವಳಿ
ಎಲ್ಲ ಕಡೆಯಲ್ಲಿ ಪಟಾಕಿಗಳ ಹಾವಳಿ ।
ನರಕಾಸುರನ ಅಂತ್ಯವನು ಆಚರಿಸಿ
ಸಂಭ್ರಮಿಸುವರು ಜನರು ಬಲಿಯನ್ನು ಸ್ವಾಗತಿಸಿ ॥

ನಂತರದ ಹಬ್ಬ ಮಕರ ಸಂಕ್ರಾಂತಿ
ಸುಗ್ಗಿಯು ಜಗದಲ್ಲಿ ಹರಡಲು ಶಾಂತಿ ।
ಹಂಚಿ ಬಾಳುವ ಸಂದೇಶ ಸಾರುತಲಿ
ಶಾಂತಿ ನೆಮ್ಮದಿಯನು ಬೇಡುವರು ದೇವನಲಿ ॥

ಹಬ್ಬಗಳ ಆಚರಿಸುತ ಭೇಧವನು ಮರೆಯೋಣ
ಹಿಂದು ಭಾಂಧವರೆಲ್ಲ ಒಂದೆಂದು ಸಾರೋಣ ।
ಪ್ರತಿ ಹಬ್ಬದಲಿ ಮಾಡುವ ಭಾರತಾಂಬೆಯ ಧ್ಯಾನ
ತಾಯ ಸೇವೆಗೆ ಮುಡಿಪಾಗಿರಲಿ ಪ್ರಾಣ ॥





ಗೋವಿಂದ್ ಬಿ.ಇ
9167762988

ಅನ್ನ ಸಂತರ್ಪಣೆ ನಿಧಿಗೆ ದೇಣಿಗೆ ನೀಡಿದ ಸದಸ್ಯರು/ಹಿತೈಷಿಗಳು (ರೂ. ಗಳಲ್ಲಿ)

ರವಿ ಕುಮಾರ್ ಎಸ್.	5001/–	ಯಶಸ್ವಿನಿ ಸೌರಭ್	600/–
ಶ್ರೀಹರಿ ಉಡುಪ	25000/–	ರವಿ ಪ್ರಕಾಶ್ ಎಸ್.	1500/–
ಉಮೇಶ್ ಕುಮಾರ್ ಜಿ.	5000/–	ಈಶ್ವರನ್ ಎ.	1000/–
ರಮೇಶ್ ಆರ್.ಎಸ್.	5000/–	ನರಸು ರಾಮಚಂದ್ರ	500/–
ಸ್ವಾಮಿನಾಥನ್ ಆರ್.ಎನ್.	2000/–	ನಾಗಾರಾಜನ್ ಎಸ್.	5000/–
ಪ್ರಸಾದ್ ಜಿ.ಎನ್.	1500/–	ನಿರ್ಮಲಾ ಸುಧೀಂದ್ರ	500/–
ರಾಮು ಪ್ರಭಾಕರ್	1001/–	ರಮಾ ದೇವಿ ಕೆ.ಆರ್.	1000/–
ಗಣೇಶ್ ಹೆಚ್.ಡಿ.	2500/–	ಸುಮಾ ಪಿ. ಸರಾಫ್	1000/–
ಸೋಮಸುಂದರ ಎಸ್.	1700/–	ಸುಷ್ಮಾ ಚಂದ್ರಶೇಖರ್	1000/–
ಸುಬ್ರಹ್ಮಣ್ಯಂ ಬಿ.	1700/–	ರಾಧಾಕೃಷ್ಣ ಎಸ್.ಆರ್.	500/–
ಗಣೇಶ್ ಶ್ರೀಧರ್ ಆರ್.	1700/–	ಮಂಗಳಾ ಅರುಣ್	100/–
ಅರುಣ್ ವಿ.	1700/–	ವಾಸು ಎಸ್.	1000/–
ಶ್ರೀನಿವಾಸ ಎಸ್.ಸಿ.	1700/–	ಬದರಿನಾರಾಯಣ್ ಹೆಚ್.ಆರ್.	1000/–
ವನಿತಾ ಮಂಜುನಾರಾಯಣ್	2000/–	ಉಮಾಶಂಕರ್ ಆರ್.ಪಿ.	1000/–
ಶ್ರೀನಿವಾಸನ್ ಎ.ವಿ.	500/–	ಮಹೇಶ್ ಆರ್.ಎಸ್.	500/–
ಗೋವಿಂದ ಪ್ರಸಾದ್ ಬಿ.ಎನ್.	5001/–	ಪದ್ಮಾ ನಾಗರಾಜ್ ಜಿ.ಎಸ್.	1000/–
ಚಂದ್ರಶೇಖರ್ ಕೆ.	1000/–	ಕುಮಾರ್ ಬಿ.ಸಿ.	1000/–
ವಿಜಯಲಕ್ಷ್ಮಿ ಎಸ್.	500/–	ವೆಂಕಟೇಶ್ ಕುಮಾರ್ ಎನ್.	1000/–
ನಾಗರತ್ನಮ್ಮ ಡಿ.ಸಿ.	2000/–	ರಮೇಶ್ ಬಾಬು ಬಿ.ಸಿ.	500/–
ಅಜಯ್ ಆರ್.ಬಿ.	2500/–	ಸುಂದರನ್ ಪಿ.	500/–
ಶಶಿಕಲಾ ಎನ್.	500/–	ಶ್ರೀನಿವಾಸನ್ ಕೆ.ಎಸ್.	500/–
ಚಂಪಕ್ ಟಿ.ಎಸ್.	1500/–	ಸತ್ಯಪ್ರಸಾದ್ ಎಸ್.ಆರ್.	500/–
ಶ್ಯಾಮಸುಂದರ್ ಆರ್.ಎ.	500/–	ಶಿವಕುಮಾರ್ ಎನ್.	5000/–
		(ದಿ॥ ಶ್ರೀಮತಿ ಭ್ರಮರಾಂಬ ಅವರ ನೆನಪಿನಲ್ಲಿ)	

ವಿದ್ಯಾ ನಿಧಿಗೆ ದೇಣಿಗೆ ನೀಡಿದ ಸದಸ್ಯರು/ಸಮುದಾಯದವರು (ರೂ. ಗಳಲ್ಲಿ)

ಕೆ.ಸಿ. ನಟರಾಜನ್	5000/–	ಡಾ॥ ನಾಗರಾಜ್ ಸಿ.	2500/–
ರವಿ ಕುಮಾರ್ ಎಸ್.	5000/–	ಪದ್ಮಿನಿ ರಾಜನ್	25000/–
ಲಲಿತಾ ಜೆ.ಆರ್. (ಲಲಿತಾ ರಾಜಗೋಪಾಲ್)	2500/–	ಗಣೇಶ್ ಹೆಚ್.ಡಿ.	2500/–
ಸ್ಕಂದ ಪರಮ್	2500/–	ರವಿಶಂಕರ್ ಆರ್.ಪಿ.	2000/–
ರಾಜಲಕ್ಷ್ಮಿ ಆರ್.	2500/–	ನಾಗರತ್ನಮ್ಮ ಡಿ.ಸಿ.	2000/–
ಮುತ್ತುಸ್ವಾಮಿ ಜಿ.	3000/–	ಅಜಯ್ ಆರ್.ಬಿ.	2500/–
ಸುಧಾ ವಿ.	5000/–	ರವಿ ಪ್ರಕಾಶ್ ಎಸ್.	2500/–
ಸತ್ಯಪ್ರಸಾದ್ ಎಸ್.ಆರ್.	2500/–	ನಾಗರಾಜನ್ ಎಸ್.	5000/–
ಶ್ಯಾಮಸುಂದರ್ ಅರ್.ಎ.	2500/–	ಸಂಜಯ್ ರಾಜಾಪುರ್	2500/–
ನಳಿನಿ ಎಸ್.	2500/–	ಬದರಿನಾರಾಯಣ್ ಹೆಚ್.ಆರ್.	1000/–
ಶ್ರೀಹರಿ ಉಡುಪ	25000/–	ನಟರಾಜ ಬಿ.ಸಿ.	2000/–
ವೆಂಕಟೇಶ್ ಆರ್.ಎಸ್.	10000/–	ವೆಂಕಟಸುಬ್ಬಯ್ಯ ಕೆ.	500/–
ಶ್ರೀಧರ್ ರಾಮಚಂದ್ರನ್	2500/–	ಶ್ರೀಮುಖ್ ಸಣ್ಣೆ	2000/–
ಅಥರ್ವ ಶ್ರೀಧರ್ ಕಶ್ಯಪ್	2500/–	ಭಾನುಪ್ರಕಾಶ್ ಎಸ್.ಎಲ್.	1000/–
ರಶ್ಮಿ ಶ್ರೀಧರ್	2500/–	ಸೂರ್ಯನಾರಾಯಣ ಬಿ.ಎಸ್.	5000/–

ವಾರ್ಷಿಕ ನಿರ್ವಹಣಾ ವೆಚ್ಚ (ವರ್ಷಕ್ಕೆ ರೂ. 500/–) ನೀಡಿದ ಸದಸ್ಯರು

ಸುಬ್ಬರಾವ್ ವಿ.
ಅರುಣ್ ವೆಂಕಟಸುಬ್ಬರಾವ್
ವೆಂಕಟೇಶ್ ಟಿ.ಎಸ್.
ಕೃಷ್ಣಮೂರ್ತಿ ಎಸ್.ಎನ್.
ಚಂಪಕಧಾಮ ಎಸ್.
ನಳಿನಿ ಎಸ್.
ರವಿಕುಮಾರ್ ಆರ್.ಎಸ್. (1000/–)
ಸುಬ್ರಹ್ಮಣ್ಯಂ ಬಿ.
ಗಣೇಶ್ ಶ್ರೀಧರ್ ಆರ್.
ರೂಪಶ್ರೀ ಎಂ.
ಅಭಯ್ ಗಣೇಶ್
ಅಟ್ಟೂರು ರಾಮಕೃಷ್ಣಶರ್ಮ
ರಮೇಶ್ ಆರ್.ಎಸ್.
ರೇಖಾ ರಮೇಶ್
ಪ್ರಸಾದ್ ಜಿ.ಎನ್.
ವೆಂಕಟೇಶ್ ಆರ್.ಎಸ್.
ರಾಧಾ ವೆಂಕಟೇಶ್
ದೀಪ್ತಿ ಅಜಯ್
ಅಶ್ವಿನಿ ವೆಂಕಟೇಶ್
ಸೋಮಸುಂದರ ಎಸ್.
ಜಯಶ್ರೀ ಎಸ್.
ರಘುನಂದನ ಎಸ್.
ಡಾ॥ ರಮಾದೇವಿ ಎಸ್.
ಚಂದ್ರಶೇಖರ್ ಎಸ್.
ಸೂರ್ಯನಾರಾಯಣ ಟಿ.ಪಿ.
ನಾಗಪದ್ಮ ಎಸ್.
ರಾಮು ಪ್ರಭಾಕರ್
ಮಣಿ ವಿ.ಎಸ್.
ಮಾತಂಗ್ ಶೇಷಗಿರಿ
ಯಶೋಧರಾ ಉಡುಪ
ನಾಗೇಶ
ಅರುಣ್ ಕೆ.ಎಸ್.
ಸರೋಜ ಕೆ.ಎಲ್.
ಉಮಾ ಎನ್. ಗೋವಿಂದ್
ವಿಜಯಕುಮಾರ್ ಎಸ್.ಆರ್.
ಶ್ರೀನಿವಾಸನ್ ಎ.ವಿ.
ದಿವಾಕರ್ ರಾಮಚಂದ್ರನ್
ರಾಜಲಕ್ಷ್ಮಿ ಆರ್.
ದಿವ್ಯೇಂದು ದಿವಾಕರ್ ಕಶ್ಯಪ್
ಅನ್ನಪೂರ್ಣ ವಿ.
ಅರುಣ್ ವಿ.
ಸುಮಾ ಅರುಣ್
ಸೂರಜ್ ಅರುಣ್
ಅಶೋಕ್ ವಿ.
ಭಾಸ್ಕರ್ ಡಿ.ಎಸ್.
ನಾಗವೇಣಿ ಭಾಸ್ಕರ್
ಪೂರ್ಣಿಮಾ ಎಸ್.
ನಿತಿನ್ ಭಾಸ್ಕರ್
ನಕುಲ್ ಭಾಸ್ಕರ್
ಗಣೇಶ್ ಹೆಚ್.ಡಿ.
ಅರುಣ್ ಹೆಚ್.ಜಿ.
ಆಶಾ ಹೆಚ್.ಜಿ.
ಉಮೇಶ್ ಕುಮಾರ್ ಜಿ. (1000/–)
ರಾಮಕೃಷ್ಣನ್ ಸಿ.
ಭಗವಾನ್ ಆರ್.
ಸೂರ್ಯಕುಮಾರಿ ಹೆಚ್.ಪಿ.
ಉದಯ್ ಬಿ. ರಾಜಾಪುರ್
ಅಜಯ್ ಆರ್.ಬಿ.
ವಸುಂಧರಾ ಎಸ್.
ಗಾಯತ್ರಿ ದೇವಿ ಡಿ.ಎನ್.
ವಿಜಯದೇವ್ ಎಸ್.
ಶ್ಯಾಮಸುಂದರ್ ಆರ್.ಎ.
ರವಿ ಪ್ರಕಾಶ್ ಎಸ್.
ಮೋಹನ್ ಸಿ.
ಶೇಷಾದ್ರಿ ಬಿ.ವಿ.
ಸಂಜಯ್ ರಾಜಾಪುರ್
ಶ್ರೇಯಸ್ ಆರ್.ಎಸ್.
ಮುತ್ತುಸ್ವಾಮಿ ಜಿ.
ಮಿಥಿಲೇಶ್ ಎಂ.
ರಘುರಾಮ್ ಟಿ.ಜೆ.
ಜಗನ್ನಾಥ್ ಟಿ.ಪಿ.
ಪದ್ಮಾ ಜೆ.
ಶ್ರೀನಿವಾಸ ಆರ್.ಎ.
ಕರ್ನಲ್ ವಿ.ಜಿ. ರಾಜನ್
ಪ್ರಶಾಂತ್ ಕುಮಾರ್ ಎಸ್.ಎಲ್.
ನಾಗಾರಾಜನ್ ಎಸ್.
ನಾರಾಯಣ ವೈ.ಜಿ.
ಸುನಂದಾ ರತನ್
ಕುಮಾರ್ ಸಿ.
ಅನಂತ ಕೆ.ಎಸ್. (1000/–)
ರಘುನಂದನ್ ಜೆ.ವಿ.
ರಮೇಶ್ ಆರ್.
ಲಲಿತಾ ಹೆಚ್.ಆರ್.
ರಾಜಲಕ್ಷ್ಮಿ ಆರ್.
ನಿರ್ಮಲಾ ಸುಧೀಂದ್ರ
ಸುಷ್ಮಾ ಚಂದ್ರಶೇಖರ್
ಸುಬ್ಬರತ್ನಮ್ಮ ಎಸ್.ಆರ್. (1000/–)
ಪ್ರಶಾಂತ್ ಆರ್.ಎಸ್
ರಾಧಾಕೃಷ್ಣ ಎಸ್.ಆರ್.
ಮೋಹನ್ ಎಸ್.
ಜ್ಯೋತಿ ಸೂರ್ಯನಾರಾಯಣ
ಶಶಿಕಲಾ ಪಿ. (1000/–)
ಭಾನುಮತಿ ಟಿ.ಎನ್. (1000/–)
ಡಾ॥ ನಾಗರಾಜ್ ಸಿ.
ಶ್ರೀನಿವಾಸ ಮೂರ್ತಿ ಸಿ.ಎಸ್.
ಮುರಳಿ ಕೆ.ಬಿ.
ಬದರಿನಾರಾಯಣ್ ಹೆಚ್.ಆರ್. (1000/–)
ಭರತ್ ವಿಜಯಕೃಷ್ಣ (1000/–)
ರಮ್ಯಾ ಹೆಚ್.ಎ.

ವಾರ್ಷಿಕ ನಿರ್ವಹಣಾ ವೆಚ್ಚ (ವರ್ಷಕ್ಕೆ ರೂ. 500/–) ನೀಡಿದ ಸದಸ್ಯರು

ಶ್ರೀನಿವಾಸ್ ಹೆಚ್.ಪಿ.
ಪರಮೇಶ್ವರ್ ಹೆಚ್.ಎಸ್.
ಪದ್ಮಿನಿ ಜೆ.ಆರ್.
ಉಮಾಶಂಕರ್ ಆರ್.ಪಿ.
ಪೂಜಾ ಉಮಾಶಂಕರ್
ಜಯರಾಮನ್ ಬಿ.ವಿ.
ವೆಂಕಟಸುಬ್ಬಯ್ಯ ಕೆ.
ರಾಧಾ ನಾಗಭೂಷಣ ಶಾಸ್ತ್ರಿ
ಮಹೇಶ್ ಆರ್.ಎಸ್.
ಪ್ರವೀಣ್ ಎ.
ಕುಮಾರ್ ಆರ್.ಎನ್.
ಸೇತುರಾಮ್ ಕೆ.ಜಿ.
ಸುಬ್ರಹ್ಮಣ್ಯಂ ವಿ.
ವಿನಾಯಕ ವಿ.
ರಾಘವ ಪ್ರಸಾದ್ ಎಸ್.ಸಿ.
ವೀಣಾ ಪ್ರಸಾದ್ ಎಸ್.ಸಿ.
ಧಾತ್ರಿ ಆರ್. ಪ್ರಸಾದ್
ರಾಹುಲ್ ಶ್ರೀನಿವಾಸ
ಮಂಜುಳಾ ಟಿ.ಆರ್.
ಶ್ಯಾಮ್ ಜಿ.ವಿ.
ಜ್ಯೋತ್ಸ್ನಾ ಶ್ಯಾಮ್
ರಮೇಶ್ ಬಾಬು ಬಿ.ಸಿ.
ಸುಂದರನ್ ಪಿ.
ಸುಜಾತಾ ಶ್ರೀನಿವಾಸ್
ಚೇತನ್ ಹೆಚ್.ಕೆ.
ಸದಾನಂದ್ ಹೆಚ್.ಕೆ.
ಅನಂತ್ ಹೆಚ್.ಜಿ.
ರವಿ ಶಂಕರ್ ಎಸ್.
ಲಕ್ಷ್ಮೀಶ ಎಸ್.
ಸುಮಂತ್ ಎಸ್.
ರವಿ ಕಿರಣ್ ಹೆಚ್.ಕೆ. (1000/–)
ಭಾನುಪ್ರಕಾಶ್ ಎಸ್.ಎಲ್.
ವನಿತಾ ಮಂಜುನಾರಾಯಣ್
ಗೋವಿಂದರಾಜು ಡಿ.ಎಸ್. (501/–)
ಸತ್ಯನಾರಾಯಣ ಎಸ್.
ಮನೋಜ್ ಎಸ್.
ಮಾನಸ ಅರವಿಂದ್

ಸಾಂತ್ವನ ನಿಧಿಗೆ ದೇಣಿಗೆ ನೀಡಿದ ಸದಸ್ಯರು ಮತ್ತು ಸಮುದಾಯದವರು (ರೂ. ಗಳಲ್ಲಿ)

ಸುಧಾ ವಿ.	5000/–	ಕುಮಾರ್ ಆರ್.ಎನ್.	1500/–
ಉಮೇಶ್ ಕುಮಾರ್ ಜಿ.	5000/–	ಸೇತುರಾಮ್ ಕೆ.ಜಿ.	4500/–
ಬದರಿನಾರಾಯಣ್ ಹೆಚ್.ಆರ್.	1000/–	ವೈಜಯಂತಿ	1000/–

ಸರ್ವಸದಸ್ಯರ ಸಭೆಗೆ ದೇಣಿಗೆ ನೀಡಿರುವವರು

ಕೆ.ಎಸ್. ಅರುಣ್ 9200/–

ಶಂಕರ ಜಯಂತಿ ನಿಧಿಗೆ ದೇಣಿಗೆ ನೀಡಿದ ಸದಸ್ಯರು (ರೂ. ಗಳಲ್ಲಿ)

ವೆಂಕಟೇಶ್ ಆರ್.ಎಸ್. 5000/–

ಹೊಸ ಸದಸ್ಯರು



ಲತಾ ಜಿ.
ಕಾವ್ಯಾ ವಿ.
ಸಾಧನಾ ಆರ್.ಡಿ.
ರೂಪಾ ಸಂಜಯ್
ಪಲ್ಲವಿ ಅನಂತ್
ಜಯಂತಿ ಕೆ.ಎಸ್.
ತನ್ಮಯ್ ಆರ್.ಎಂ.
ವಿಜಯಶ್ರೀ ಬಿ.ಜಿ.
ಮಹತಿ ಎಸ್. ಅನಂತ್
ಗೋವಿಂದರಾಜು ಎಂ.ಆರ್.
ಸುಶೀಲ ಕೃಷ್ಣಮೂರ್ತಿ



ಕಾರ್ಯಕಾರಿ ಸಮಿತಿಯು ನೂತನ ಸದಸ್ಯರನ್ನು ಬೃಹಚ್ಚರಣ ಸಂಘಕ್ಕೆ ಹಾರ್ದಿಕವಾಗಿ ಸ್ವಾಗತಿಸುತ್ತದೆ.

ನಮ್ಮನ್ನಗಲಿದ ನಮ್ಮವರಿಗೆ ಗೌರವಪೂರ್ಣ ಶ್ರದ್ಧಾಂಜಲಿ

	ನಾಗರಾಜ ಬಿ.ಆರ್.	74	01.02.2026	ಸಂಘದ ಸದಸ್ಯ
	ರಂಗನಾಥ್ ಟಿ.ಎಸ್.	72	29.04.2026	ಹಿಂದಿನ ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಟಿ.ಎಸ್. ರಮೇಶ್‌ರವರ ಸಹೋದರ
	ಜಯಲಕ್ಷ್ಮಿ	66	02.05.2026	ಮಹಾಪೋಷಕ ಶ್ರೀ ಕೆ.ಸಿ. ಶೇಖರ್‌ರವರ ಸೋದರಮಾವಂದಿರ ಸೊಸೆ
	ವಸಂತ	74	12.05.2026	ಸಂಘದ ಸದಸ್ಯರಾದ ಶ್ರೀ ಸಿ. ವೆಂಕಟೇಶ್ ಮತ್ತು ಶ್ರೀ ಕುಮಾರ್‌ರವರ ಸಹೋದರಿ
	ಸಾವಿತ್ರಮ್ಮ	85	23.06.2026	ಸಂಘದ ಸದಸ್ಯ ಶ್ರೀ ಆರ್.ವಿ. ಮುರಳೀಧರ್ ಅವರ ತಾಯಿ
	ವೆಂಕಟೇಶ್ ಜಿ.ಎಸ್.	86	28 06.2026	ಸಂಘದ ಸದಸ್ಯ
	ಭ್ರಮರ ಗೋಪೀನಾಥ್	86	21.08.2026	ಸಂಘದ ಸದಸ್ಯೆ
	ಲಕ್ಷ್ಮೀನಾರಾಯಣ (ಮುರಳಿ)	74	21.08.2026	ಸದಸ್ಯ ಜೆ.ವಿ. ರಘುನಂದನ್ ಅವರ ಚಿಕ್ಕಪ್ಪ
	ಮಂಜುನಾಥ್ ಆರ್.ಎನ್.	65	26.08.2026	ಸಂಘದ ಸದಸ್ಯ, ಶ್ರೀ ಆರ್.ಏನ್. ಸ್ವಾಮಿನಾಥನ್ ಅವರ ಸೋದರ
	ಸೂರ್ಯಕುಮಾರಿ ಎಚ್.ಪಿ.	77	28.08.2026	ಸಂಘದ ಸದಸ್ಯೆ, ಶ್ರೀ ಆರ್. ಭಗವಾನ್ ಅವರ ಪತ್ನಿ



ನಮ್ಮ ಸಂಘದ ಕಾರ್ಯಚಟುವಟಿಕೆಗಳಿಂದ ಪ್ರಭಾವಿತರಾಗಿ ದೇಣಿಗೆಯ ರೂಪದಲ್ಲಿ ಕಾರ್ಯಕಾರಿ ಸಮಿತಿಗೆ ಪ್ರೋತ್ಸಾಹ ನೀಡುತ್ತಿದ್ದ ದಾನಿ ಶ್ರೀಮತಿ ಸುಲೋಚನ ರಾವ್ ಅವರು 21–09–2026 ರಂದು ಬೆಂಗಳೂರಿನಲ್ಲಿ ನಿಧನರಾದರು. ಸಂಘದ ಪೋಷಕ ಸದಸ್ಯೆ ಶ್ರೀಮತಿ ನಳಿನಿ ಸುಬ್ರಹ್ಮಣ್ಯಂ ಅವರ ಮಾತೃಶ್ರೀಗಳಾಗಿದ್ದ ಅವರಿಗೆ 87 ವರ್ಷ ವಯಸ್ಸಾಗಿತ್ತು.

ಸಂಘವು ನಮ್ಮನ್ನು ಅಗಲಿದವರ ಆತ್ಮಕ್ಕೆ ಸದ್ಗತಿ ಲಭಿಸಲೆಂದು ಪ್ರಾರ್ಥಿಸುತ್ತದೆ.

ಆದಿಗುರು ಶ್ರೀ ಶಂಕರ ಭಗವತ್ಪಾದರ ಜಯಂತಿ

ಅಷ್ಟವರ್ಷೇ ಚತುರ್ವೇದಿ ದ್ವಾದಶೇ ಸರ್ವಶಾಸ್ತ್ರವಿತ್ ।
ಷೋಡಶೇ ಕೃತವಾನ್ ಭಾಷ್ಯಂ ದ್ವಾತ್ರಿಂಶೇ ಮುನಿರಭ್ಯಗಾತ್ ॥

(ಎಂಟು ವರ್ಷಕ್ಕೆ ನಾಲ್ಕು ವೇದಗಳ ಜ್ಞಾನ, ಹನ್ನೆರಡು ವರ್ಷಕ್ಕೆ ಎಲ್ಲಾ ಶಾಸ್ತ್ರಗಳ ಪಾರಂಗತೆ, ಹದಿನಾರು ವರ್ಷಕ್ಕೆ ಪ್ರಸ್ಥಾನತ್ರಯಗಳಿಗೆ (ಉಪನಿಷತ್, ಬ್ರಹ್ಮಸೂತ್ರ ಮತ್ತು ಶ್ರೀಮದ್ಭಗವದ್ಗೀತೆ)ಗಳಿಗೆ ಭಾಷ್ಯ ರಚನೆ ಮತ್ತು ಮೂವತ್ತೆರಡು ವರ್ಷಕ್ಕೆ ಮಹಾಸಮಾಧಿ.)

ಜಗದ್ಗುರು ಶ್ರೀ ಶಂಕರಾಚಾರ್ಯರ ಜಯಂತಿಯನ್ನು ಬೃಹಚ್ಚರಣ ಸಂಘವು ಬಸವನಗುಡಿಯ ಶ್ರೀಮಲ್ಲಿಕಾರ್ಜುನ ದೇವಾಲಯದ ಅವರಣದಲ್ಲಿ ಅಲ್ಲಿನ ಆಡಳಿತ ಮಂಡಳಿಯ ಸಹಯೋಗದೊಂದಿಗೆ ದಿನಾಂಕ 21.4.2026 ಮಂಗಳವಾರದಂದು ಆಚರಿಸಿತು. ವೈಶಾಖ ಶುದ್ಧ ಪಂಚಮಿಯಾದ ಅಂದು ಸಂಜೆ 6 ರಿಂದ 8ರವರೆಗೆ ಭಕ್ತಿ ಸಂಗೀತ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಈ ಬಾರಿ ಬೃಹಚ್ಚರಣ ಕಲಾ ಕುಟುಂಬದ ಸದಸ್ಯರಾದ ತಂದೆ, ಪುತ್ರ, ಮತ್ತು ಪುತ್ರಿ ಕೂಡಿ ಭಗವತ್ ಸೇವೆಯಾದ ಸಂಗೀತ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಸಂಘದ ಸದಸ್ಯರಾದ ಶ್ರೀ ಆರ್.ಎಸ್. ಪ್ರಶಾಂತ್‌ರವರ ಪುತ್ರಿ ಚಿ. ಎಸ್.ಪಿ. ವಾಗ್ದೇವಿಯವರ ಕೊಳಲು ವಾದನ, ಪುತ್ರ ಚಿ. ಎಸ್.ಪಿ. ಆದಿತ್ಯರಾಮ್‌ರವರು ರಿದಮ್ ಪ್ಯಾಡ್, ಸ್ವತಃ ಶ್ರೀ ಪ್ರಶಾಂತ್‌ರವರು ತಬಲಾ ನುಡಿಸಿದರು. ಕಿರುತೆರೆ ಮತ್ತು ಚಲನಚಿತ್ರಗಳಲ್ಲಿ ಪ್ರಖ್ಯಾತ ಪಿಯಾನೋ ಮತ್ತು ಕೀಬೋರ್ಡ್ ವಾದಕರಾದ ಶ್ರೀ ಕುಮಾರ್ ಅವರು ಕೀಬೋರ್ಡ್ ನುಡಿಸಿದರು.

ಸಮಯಕ್ಕೆ ಸರಿಯಾಗಿ ಸಂಗೀತ ಕಾರ್ಯಕ್ರಮ ಪ್ರಾರಂಭವಾಯಿತು. ಚಿ. ವಾಗ್ದೇವಿಯವರು ಭಗವತ್ಪಾದ ಶ್ರೀ ಶಂಕರಾಚಾರ್ಯರ ಸ್ತೋತ್ರಗಳಾದ ಗಣೇಶ ಪಂಚರತ್ನ ಸ್ತೋತ್ರ (“ಮುದಾಕರಾತ್ತಮೋದಕಂ”), ಗುರುವಾಷ್ಟಕ (“ಶರೀರಂ ಸ್ವರೂಪಂ”), ಕಾಲಭೈರವಾಷ್ಟಕ (“ದೇವರಾಜಸೇವ್ಯಮಾನ”) ಮತ್ತು ಮಹಿಷಾಸುರ ಮರ್ದಿನಿ ಸ್ತೋತ್ರಗಳನ್ನು ಪ್ರಸ್ತುತಪಡಿಸಿದರು. ಜೊತೆಗೆ, ಕರ್ನಾಟಕ ಸಂಗೀತ ಪಿತಾಮಹರಾದ ಶ್ರೀ ಪುರಂದರದಾಸರ ದೇವರನಾಮಗಳು, ತ್ಯಾಗಬ್ರಹ್ಮ ಶ್ರೀ ತ್ಯಾಗರಾಜರ ಕೀರ್ತನೆಗಳು ಅಲ್ಲದೇ, ಅನಂತ ಶ್ರೀ ವಿಭೂಷಿತ ಶ್ರೀ ಶ್ರೀ ಭಾರತೀ ತೀರ್ಥರ ಪ್ರಖ್ಯಾತ ರಚನೆ “ಗರುಡ ಗಮನ ತವ” ಮತ್ತು ಶ್ರೀ ದಯಾನಂದ ಸರಸ್ವತಿಗಳ ರೇವತಿ ರಾಗದ ಎಲ್ಲ ಕಡೆಗಳಲ್ಲಿ ಪ್ರಚಲಿತವಾಗಿರುವ “ಭೋ ಶಂಭೋ ಶಿವ ಶಂಭೋ” ರಚನೆಗಳನ್ನು ನುಡಿಸಿ ನೆರೆದಿದ್ದ ಭಕ್ತಾದಿಗಳ ಮೆಚ್ಚುಗೆ ಗಳಿಸಿದರು. ಕೀ ಬೋರ್ಡ್ ವಾದಕರು ರಚನೆಗಳಿಗೆ ತಕ್ಕಂತೆ ವಿಶೇಷ ನಾದಮಯ ಮತ್ತು ಧ್ವನಿ ಪರಿಣಾಮಗಳನ್ನು (special effects ಗಳನ್ನು) ನೀಡಿದ್ದು ಸಂಗೀತಕ್ಕೆ ಪೂರಕವಾಗಿತ್ತು. ಇದಕ್ಕೆ ತಕ್ಕಂತೆ ತಾಳವಾದ್ಯಗಳಾದ ತಬಲಾ, ರಿದಮ್ ಪ್ಯಾಡ್‌ಗಳಲ್ಲಿ ಲಯವಿನ್ಯಾಸಗಳು ಚೆನ್ನಾಗಿ ಅಭಿವ್ಯಕ್ತಿಗೊಂಡು ಕಛೇರಿ ಖಳೆ ಕಟ್ಟುತ್ತಿದ್ದುದು ಗೋಚರವಾಗುತ್ತಿತ್ತು. ಇಡೀ ಎರಡು ಗಂಟೆಗಳು ಸರಿದಿದ್ದೇ ತಿಳಿಯಲಿಲ್ಲ ಎಂದು ಆಲಿಸಿದವರು ಹೇಳುತ್ತಿದ್ದರು. ಚಿ॥ ವಾಗ್ದೇವಿ ಚಿಕ್ಕ ವಯಸ್ಸಿನಲ್ಲೇ ಬಹಳ ಶ್ರದ್ಧೆಯಿಂದ ಕಲಿತು, ಅಭ್ಯಾಸ ಮಾಡಿ, ಕಾರ್ಯಕ್ರಮಗಳನ್ನು ನೀಡಿ ಮೆಚ್ಚುಗೆ ಗಳಿಸುತ್ತಿದ್ದಾರೆ. ಬೃಹಚ್ಚರಣ ಬಂಧುಗಳೊಂದಿಗೆ ದೇವಸ್ಥಾನಕ್ಕೆ ಬಂದ ಇತರ ಭಕ್ತಾದಿಗಳೂ ಸಂಗೀತವನ್ನು ಆಸಕ್ತಿಯಿಂದ ಆಲಿಸಿದರು.

ಪ್ರಾರಂಭದಲ್ಲಿ ಕಲಾವಿದರನ್ನು, ಭಕ್ತಾದಿಗಳನ್ನು ಸಂಘದ ಕಾರ್ಯದರ್ಶಿಗಳಾದ ಶ್ರೀ ಆರ್.ಎ. ಶ್ಯಾಮಸುಂದರರವರು ಸ್ವಾಗತಿಸಿದರು. ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀಮತಿ ಹೆಚ್.ಆರ್. ಲಲಿತಾರವರು ಸಭೆಗೆ ಕಲಾವಿದರ ಪರಿಚಯವನ್ನು ಮಾಡಿಕೊಟ್ಟರು. ಕಿರಿಯ ಕಲಾವಿದೆಯಾದ ಚಿ. ವಾಗ್ದೇವಿ ಈ ವರ್ಷ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಉತ್ತಮ ಅಂಕಗಳೊಂದಿಗೆ ಉತ್ತೀರ್ಣರಾಗಿದ್ದಾರೆ. ಚಿ. ಆದಿತ್ಯರಾಂರವರು ಎಂ.ಬಿ.ಎ. ವ್ಯಾಸಂಗ ಮಾಡುತ್ತಿದ್ದಾರೆ. ಈ ಎಲ್ಲ ಕಲಾವಿದರಿಗೆ ಶ್ರೀ ಶಾರದಾಂಬೆ ಹಾಗೂ ಭಗವತ್ಪಾದರ ಅನುಗ್ರಹ ದೊರಕಲೆಂದು ಬೃಹಚ್ಚರಣ ಸಂಘವು ಆಶಿಸುತ್ತದೆ.

ಸಂಘದ ಉಪಾಧ್ಯಕ್ಷರಾದ ಶ್ರೀ ಶಶಿಧರ್‌ರವರು ಕಲಾವಿದರಿಗೆ ಮತ್ತು ದೇವಸ್ಥಾನದ ಆಡಳಿತ ಮಂಡಳಿಯವರಿಗೆ ವಂದನೆ ಸಲ್ಲಿಸಿದರು. ಕಾರ್ಯಕ್ರಮದ ಛಾಯಾಚಿತ್ರಗಳನ್ನು ಕಾರ್ಯದರ್ಶಿ ಶ್ರೀ ಶ್ಯಾಮಸುಂದರ್, ಸದಸ್ಯ ಶ್ರೀ ಶ್ರೀಕಾಂತ್ ಮತ್ತು ಸಂಘದ ದಾನಿಗಳಾದ ಶ್ರೀ ಅರ್ಜುನ್ ದೇಶಪಾಂಡೆ ಸೆರೆಹಿಡಿದರು. ಸಂಘದ ಪರವಾಗಿ ಹಿರಿಯ ಸದಸ್ಯರು ಮತ್ತು ಬೃಹಚ್ಚರಣ ಪತ್ರಿಕೆಯ ಪೂರ್ವ ಸಂಪಾದಕರು ಮತ್ತು ಛಾಯಾಗ್ರಾಹಕರಾದ ಶ್ರೀ ಕೆ.ಸಿ. ನಟರಾಜನ್‌ರವರು ಮತ್ತು ಹಿರಿಯ ಪೋಷಕಿ ಶ್ರೀಮತಿ ಆರ್. ರಾಜಲಕ್ಷ್ಮಿಯವರು ಕಲಾವಿದರಿಗೆ ಪ್ರೋತ್ಸಾಹಪೂರ್ವಕವಾಗಿ ಫಲ ಮತ್ತು ನಗದು ಕಾಣಿಕೆ ನೀಡಿ ಆಶೀರ್ವದಿಸಿದರು.

ಪ್ರತಿ ವರ್ಷದಂತೆ ಈ ವರ್ಷವೂ ಭಗವತ್ಪಾದರ ಕಂಚಿನ ಅಲಂಕೃತ ಮೂರ್ತಿಯನ್ನೊಳಗೊಂಡ ಬಣ್ಣ ಬಣ್ಣದ ವಿದ್ಯುತ್ ದೀಪ ಮತ್ತು ಮುತ್ತಿನ ಪಲ್ಲಕ್ಕಿಯ ಮೆರವಣಿಗೆಯು ಬಡಾವಣೆಯ ಪ್ರಮುಖ ಬೀದಿಗಳಲ್ಲಿ ಭಕ್ತಾದಿಗಳಿಗೆ ದರ್ಶನ ನೀಡಿತು.

ಕಾರ್ಯಕ್ರಮದ ಕಡೆಯಲ್ಲಿ ಬಂದವರಿಗೆಲ್ಲಾ ಪ್ರಸಾದ ವಿತರಿಸಲಾಯಿತು.



ಆರ್. ರಮೇಶ್
9886034048



If undelivered please return to :
President
'Bruhacharana Sangha'
No. 27/1, Bull Temple Road,
Basavanagudi,
Bengaluru - 560 004.
E-mail : magazines@mmdbs.in
Website : mmdbs.in

To,

Book-Post

Published by Sri K.S. Arun, President, 'BRUHACHARANA SANGHA', # 27/1, Bull Temple Road, Basavanagudi, Bengaluru - 560004.
Printed at Hamsanikethan Prints, No. 126, C.T. Bed, 6th Cross Rd, Banashankari Stage II, Banashankari, Bengaluru - 560070.